Registered No. M. 1393.

ಕ ಪ್ಪು ಟ

ಕಾಲಾಣಿ

ಕಂಠೀರವ

KANTEERAVA

KANARESE, BI-WEEKLY

ESTD. 1919 ಸ್ಥಾಪನೆ

ಸಂಪುಟ ೨೨ | ಮಂಗಳೂರು, ೧೯ಳಂನೇ ಇಸವಿ ಜುಲೈ ತಾರೀಕು ೧೨ನೇ ಶುಕ್ರವಾರ | ಸಂಚಿಕೆ ೩೦

VOL. XXII | MANGALORE, FRIDAY, JULY 12, 1940 | NO. 30

ವಿವಿಧ ರಾಷ್ಟ್ರಗಳ ಶಕ್ತಿ—ಸಾಮರ್ಥ್ಯ

ಬಲ್ಗೇರಿಯಾ

ಜನಸಂಖ್ಯೆ—೬೦೭೯೯೯. ವಿಶಾಲ—೪೯೬೨೫ ಚದರ ಮೈಲಿಗಳು. ನೇನಿಲೀ ಒಪ್ಪಂದಕ್ಕನುಸಾರವಾಗಿ, ಬಲ್ಗೇರಿಯವು ತ್ರೇಸ್ ಪ್ರಾಂತ್ಯವನ್ನು ಮಿತ್ರರಾಷ್ಟ್ರಗಳಿಗೆ ಇತ್ತಿತು. ಇದು ೧೯೧೯ರ ನವಂಬರ ೨೭ರಲ್ಲಿ. ಸ್ಟುಮ್‌ನಿತ್ ಲೈನ್, ಯುಗೋಸ್ಲಾವಿಯದ ಈಶಾನ್ಯ ಭಾಗದ ಒಂದಂಶ ಮತ್ತು ದೊಬುಜಾಗಳನ್ನು ೧೯೧೩ರಲ್ಲಿ ರುಮೇನಿಯಕ್ಕೆ ಕೊಟ್ಟತು. ಸರಕಾರದ ಬ್ಯಾಂಕ್ಕಿನಲ್ಲಿರುವ ಹಣ ೫ ಮಿಲಿಯ ಪವನುಗಳು.

ಗ್ರೀಸ್

ಜನಸಂಖ್ಯೆ—೬೯೩೬ ಸಾವಿರ. ವಿಶಾಲ—೫೦೨೭೦ ಚದರ ಮೈಲಿಗಳು. ಸರಕಾರದ ಬಳಿಯಲ್ಲಿರುವ ಹಣ ೭ ಮಿಲಿಯ ಪವನುಗಳು.

ಹಂಗೇರಿ

ಜನಸಂಖ್ಯೆ—೧೦೦೪೯ ಸಾವಿರ. ವಿಶಾಲ ೪೦೫೦೦ ಚದರ ಮೈಲಿಗಳು. ಸರಕಾರದ ಹಣ—೯ ಮಿಲಿಯ ಪವನುಗಳು. ಇದಕ್ಕೆ ೧೯೩೮ರಲ್ಲಿ ಜೆಕೊಸ್ಲೊವಾಕಿಯದ ಒಂದು ಭಾಗವೂ ದೊರೆತಿದೆ.

ರುಮೇನಿಯ

ಜನಸಂಖ್ಯೆ—೧೯೭೪ ಸಾವಿರ. ವಿಶಾಲ—೧೧೩೭೪೪ ಚದರ ಮೈಲಿಗಳು. ಸರಕಾರದ ಬಳಿ ಇರುವ ಹಣ ೨೮ ಮಿಲಿಯ ಪವನುಗಳು. ಈ ರಾಷ್ಟ್ರದ ಒಂದಂಶ ರಷ್ಯಕ್ಕೆ ಇತ್ತಲಾಗಿ ಸೇರಿತು. ಆದರಿಂದಾಗಿ ಜನಸಂಖ್ಯೆಯೂ, ವಿಶಾಲತೆಯೂ ಕಡಿಮೆಯಾಗಿದೆ.

ಯುಗೊಸ್ಲಾವಿಯ

ಜನಸಂಖ್ಯೆ ೧೫೪೪ ಲಕ್ಷ. ವಿಶಾಲ ೯೬೪೫೫ ಚದರ ಮೈಲಿಗಳು. ಇದಕ್ಕೆ ಅಲ್ಬೇನಿಯ, ಗ್ರೀಸ್, ಬಲ್ಗೇರಿಯ, ರುಮೇನಿಯ, ಹಂಗೇರಿ, ಜರ್ಮನಿ—ಹಾಗೂ ಇಟೆಲಿಗಳ ಗಡಿಗಳು ಹೊಂದಿಕೊಂಡಿವೆ. ಸರಕಾರದ ಖಜಾನೆ ೯ ಮಿಲಿಯ ಪವನುಗಳು.

ಸ್ವಿಜರ್‌ಲ್ಯಾಂಡ್

ಜನಸಂಖ್ಯೆ—೪೧೪೬ ಸಾವಿರ. ವಿಶಾಲ—೧೫೯೪೪ ಚದರ ಮೈಲಿಗಳು. ಸರಕಾರದ ವಶವಿರುವ ಹಣ ೧೫೦ ಮಿಲಿಯ ಪವನುಗಳು. ಇದರಲ್ಲಿ ಶೇಕಡಾ ೬೦ರಷ್ಟನ್ನು ಪರರಾಷ್ಟ್ರಗಳಿಗೆ—ರಕ್ಷಣೆ ಬಗ್ಗೆ—ಸಾಗಿಸಲಾಗಿದೆ.

ಟರ್ಕಿ

ಜನಸಂಖ್ಯೆ—೧೫೫೮ ಸಾವಿರ. ವಿಶಾಲ—೨೯೪೪೧೬ ಚದರ ಮೈಲಿಗಳು. ಕಪ್ಪು ಸಮುದ್ರದ ಬಾಯಿಯ ಮೇಲಿನ ಅಧಿಕಾರ ಇದಕ್ಕಿದೆ. ಇದರಿಂದಾಗಿಯೂ, ನೆಲ ಸೈನ್ಯಬಲದಿಂದಾಗಿಯೂ ಗಣನೀಯವಾಗಿದೆ. ಸರಕಾರದ ವಶವಿರುವ ಹಣ ಬರೇ ೬ ಮಿಲಿಯ ಪವನುಗಳು.

ಈಜಿಪ್ತ್

ಜನಸಂಖ್ಯೆ—೧೫೯೦೪೫೫. ವಿಶಾಲ—೪೪೩ ಸಾವಿರ ಚದರ ಮೈಲಿಗಳು. ಬ್ರಿಟಿಷರ ಅಂಕೆಯ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟದ್ದು, ೧೯೩೭ರಲ್ಲಿ ಆರಸೊತ್ತಿಗೆಯ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟಿತು; ಸರಕಾರದ ಭಂಡಾರ—೬೩ ಲಕ್ಷ ಪವನುಗಳು. ಇದರ ಹತ್ತಿರದಲ್ಲಿದ್ದು ಈಜಿಪ್ತ್ ಹಾಗೂ ಬ್ರಿಟನ್‌ಗಳಿಂದ ಜೊತೆಯಾಗಿ ಆಳಲ್ಪಡುತ್ತಿರುವ ಆಂಗ್ಲೋ ಈಜಿಪ್ಶಿಯನ್ ಸುಡಾನ್‌ನ ವಿಶಾಲ ೯೬೯೦೦ ಚದರ ಮೈಲಿಗಳಿದ್ದು ಜನಸಂಖ್ಯೆ ಸುಮಾರು ೫ ಮಿಲಿಯ ದಷ್ಟಿದೆ.

ಇರಾನ್

ಇದರ ಹಿಂದಿನ ಹೆಸರು ಪರ್ಷಿಯಾ. ಜನಸಂಖ್ಯೆ ೧೫ ಮಿಲಿಯ. ವಿಶಾಲ—೬೨೮ ಸಾವಿರ ಚದರ ಮೈಲಿಗಳು. ಖಜಾನೆಯ ಹಣ ೫ ಮಿಲಿಯ ಪವನುಗಳು.

ಇರಾಖ್

ಜನಸಂಖ್ಯೆ—೪೫ ಮಿಲಿಯ. ವಿಶಾಲ—೧೧೬೫೦೦ ಚದರ ಮೈಲಿಗಳು. ೧೯೩೨ರ ತನಕ ಬ್ರಿಟನ್ನಿನ ರಕ್ಷಣೆಯಲ್ಲಿತ್ತು. ೧೯೨೭ರ ಒಪ್ಪಂದದ ಪ್ರಕಾರ ಪರರಾಷ್ಟ್ರಗಳು ಈ ರಾಷ್ಟ್ರದ ಮೇಲೇರಿ ಬಂದರೆ ರಕ್ಷಿಸುತ್ತೇನೆಂದು ಬ್ರಿಟನ್ ಭರವಸೆ ಕೊಟ್ಟಿದೆ.



ಕತ್ತಲು ಕವಿಯುತ್ತಲಿದೆ—ಕಾವಲು ಸಾಗುತ್ತಲೇ ಇದೆ.

ಬ್ರಿಟಿಷ್ ಹಡಗೊಂದು ಸಂಜೆ ಶಾಂತವಾಗಿ ತೇಲುತ್ತಿದೆ. ರಾತ್ರಿ ಬಂದರೂ ಈ ಹಡಗಿನಲ್ಲಿರುವವರಿಗೆ ನಿದ್ರೆ ಇಲ್ಲ—ಸದಾ ಸಿದ್ಧರಾಗಿ ಕಾವಲು ನಡೆಸುವ ಕಾರ್ಯ ತಡೆಯಿಲ್ಲದೆ ನಡೆಯುತ್ತಿರಬೇಕು.

ನಿಮ್ಮ ಪಿತ್ತರಸವನ್ನು ಎಚ್ಚರಿಸಿರಿ-

'ಕ್ಯಾರ್ಟೋಮಾಲ್'
ಇರದೆ- ನೀವು ಹಾಸಿಗೆಯಿಂದ
ಸಂಪೂರ್ಣ ಶಕ್ತಿ ಮತ್ತು ಸಂತೋಷ
ದೊಡನೆ ಹಾರುವಿರಿ.

ಪ್ರತಿ ದಿವಸವೂ ನಿಮ್ಮ ಪಿತ್ತಕೋಶದಿಂದ ಎರಡು ಪೈಂಟು ಪಿತ್ತರಸವು ನಿಮ್ಮ ಕರುಳಿಗೆ ಹರಿಯದಿದ್ದರೆ ನಿಮ್ಮ ಆಹಾರವು ಜೀರ್ಣವಾಗದೆ ಕರುಳಿನಲ್ಲಿಯೇ ಕೊಳೆಯುತ್ತದೆ. ವಾಯು ತುಂಬಿ, ಹೊಟ್ಟೆಯು ಊದಿ, ಮಲಬದ್ಧತೆಯಾಗುತ್ತದೆ. ಇಡೀ ಶರೀರ ಪ್ರಕೃತಿಯು ವಿಷಮಯವಾಗಿ, ನಿರುತ್ಸಾಹವೂ ನಿಶ್ಶಕ್ತಿಯೂ ಉಂಟಾಗಿ, ಪ್ರಪಂಚವೇ ನಿಮಗೆ ಬೇಸರಿಕೆಯನ್ನುಂಟುಮಾಡುತ್ತದೆ. ಒಮ್ಮೆ ಭೇದಿಯಾದ ಮಾತ್ರಕ್ಕೆ ಈ ರೋಗವು ಸಮೂಲ ನಾಶವಾಗುವುದಿಲ್ಲ. ಕಾರ್ಟರ್ಸ್ ಲಿಟ್ಲ್ಸ್ ಲಿವರ್ ಪಿಲ್ಸ್ ಮಾತ್ರ ಕರುಳಿಗೆ ಎರಡು ಪೈಂಟು ಪಿತ್ತರಸವನ್ನು ಸಲೀಸಾಗಿ ನೀಡುತ್ತದೆ. ನೀವು ಸದಾ ಆನಂದ ಮತ್ತು ಉತ್ಸಾಹದಲ್ಲಿರುವಂತೆ ಮಾಡುವುದು. ಈ ಮಾತ್ರೆಗಳು ನಿರಪಾಯಕ ಮತ್ತು ಸೌಮ್ಯವಾಗಿದ್ದರೂ, ಪಿತ್ತರಸವನ್ನು ಸಲೀಸಾಗಿ ಸಾಗಿಸುವುದು ಆಶ್ಚರ್ಯಕರವಾಗಿದೆ. ಕೆಂಪು ಪೊಟ್ಟಣದ ಮೇಲೆ 'ಕಾರ್ಟರ್ಸ್ ಲಿಟ್ಲ್ಸ್ ಲಿವರ್ ಪಿಲ್ಸ್' ಎಂಬ ಹೆಸರಿದ್ದರೆ ಮಾತ್ರ ಕೊಂಡುಕೊಳ್ಳಿರಿ. ಮಿಕ್ಕವುಗಳನ್ನು ತಿರಸ್ಕರಿಸಿರಿ. ಬೆಲೆ ಆಣೆ ೧೦. CARTER-4037

ರಾಜಾ ಸ್ನೋ

ಅಂದಕ್ಕಾಗಿ

ಮಣ್ಯಂ ಅಂಡ್ ಕೋ.,
ಮದರಾಸು ಮತ್ತು ಬೆಂಗಳೂರು

ಲೇಚ್‌ಟೋಯ್ಸ್ಟಿನ್

ಸ್ವಿಜರ್‌ಲ್ಯಾಂಡ್ ಮತ್ತು ಮೊರಲ್‌ಬರ್ಗ್‌ಗಳ ನಡುವಿನ ಪುಟ್ಟ ಪ್ರಭೇಶ—೧೪ ಸಾವಿರ ಜರ್ಮನ್ ಭಾಷೆಯಾಡುವ ನುಂಡಿ ಇದ್ದಾರೆ.

ಬಂಗಾಲವನ್ನೆಚ್ಚರಿಸಿದ

ಹೋಲ್‌ವೆಲ್ ಪ್ರತಿಮೆ

ಇದರ ವಿಚಾರವೇನು?——————ಹೋಲ್‌ವೆಲ್ ಯಾರು?

(ಲೇಖಕರು:—ಶ್ರೀ ನಿಲ್ಕುನ್ ಪೆರುಮಾಳ್)

ಇದಾರ ಪ್ರತಿಮೆ? ರಾಜಕಾರಣಿ, ವಿದ್ವಾಂಸ, ನ್ಯಾಯಾಧಿಕಾರಿ, ಪ್ರಾಂತ್ಯವನ್ನು ಗೆದ್ದವ ಅಥವಾ ಅಸಮಾನ ವೀರನೊಬ್ಬನದೇ? ಆದರೆ, ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ ಕಲ್ಕತ್ತೆಯ ನಿವಾಸಿಯಾಗಿದ್ದ ಐಯರ್‌ಲ್ಯಾಂಡ್ ದೇಶದವ ನಾದ ಜೋನ್ ಜೆಫಾನಿಯಾ ಹೋಲ್‌ವೆಲ್ ಪ್ರತಿಮೆಗೆ ಪಾತ್ರನಾಗುವ ಈ ಯಾವ ಪಂಗ ಡಕ್ಕೂ ಸೇರಿದವನಲ್ಲ. ಆದರೂ ಕಲ್ಕತ್ತೆಯಲ್ಲಿ ಈತನಿಗೊಂದು ನೆನಹನ್ನು ನಿಲ್ಲಿಸಿದ್ದಾರೆ. ಅದೇಕೆ? "ಕಲ್ಕತ್ತೆಯ ಕತ್ತಲೆಯ ಕೋಣೆ"ಯ ವಿಚಾರ ವನ್ನು ಆತ ಇತಿಹಾಸದಲ್ಲಿ ಸೇರಿಸಿದನೆಂದೇ? ಆ ಘಟನೆ ನಡೆಯಿತೋ ಇಲ್ಲವೋ ಎಂಬುದಂತೂ ಇನ್ನೂ ಶೋಧಿತವಾಗಿಲ್ಲವಾದರೂ—ಶೋಧಕರು "ಬ್ಲೇಕ್ ಹೋಲ್ ಆಫ್ ಕಲ್ಕತ್ತ" ಘಟನೆ ನಡೆದಿಲ್ಲವೆಂದು ಸಾರಿದ್ದಾರೆ. ಅಂತೂ ಆಂಗ್ಲ ಇತಿಹಾಸಕಾರರ ಅಭಿಪ್ರಾಯದಂತೆ ಈ ಘಟನೆ ನಡೆದಿಲ್ಲವೆಂದಾದರೂ, ಹೋಲ್‌ವೆಲ್ ಈ ಘಟನೆಯ ಕುರಿತಾದ ವಿಚಿತ್ರ ವಿಚಾರಗಳ ಹುಟ್ಟಿಗೂ, ಹೆಚ್ಚಿನ ಆಗಿರದ ವಿಚಾರಗಳಿಗೂ ಜವಾಬ್ದಾರ ನೆಂಬುದು ಸಿದ್ಧ. ಆದರೂ ಇನ್ನೂ ಪರಿಶೋ ಧನೆಯಾಗದ ಇತಿಹಾಸವನ್ನು ಬರೆದ ಈ ವ್ಯಕ್ತಿ ಗಾಗಿ ಅದೇಕೆ ಬ್ರಿಟಿಷರು ಪ್ರತಿಮೆ ನಿಲ್ಲಿಸಿದರೋ ಅದಂತೂ ಭಾರತೀಯನಾದವನ ತಿಳಿವಿಗೆ ಸಿಲುಕ ದಂತಾಗಿದೆ!

೧೭೫೦ರ ಕಾಲದಲ್ಲಿ ಹೋಲ್‌ವೆಲ್ ಸಾ ಮಾನ್ಯ ಡಾಕ್ಟರ್ ಕೆಲಸ ನಡೆಸಿಕೊಂಡಿದ್ದ. ಡಾಕ್ಟರನಾಗುವ ಮುಂಚೆ ಈತ ಹೊಲೇಂಡಿನಲ್ಲಿ ವ್ಯಾಪಾರಿಯಾಗಿದ್ದ. ಲಂಡನಿನಲ್ಲಿ ವೈದ್ಯನಾ ದೊಡನೆ ಭಾರತಕ್ಕೆ ವ್ಯಾಪಾರಿಯಾಗಿ ಹಾಗೂ ಹಡಗದ ವೈದ್ಯನಾಗಿ ಬಂದ. ತಿಳಿದು ಬಂದ ವಿವರದಿಂದ ಇವನಿಗೆ ಡಾಕ್ಟರಿಯಲ್ಲಿ ಪ್ರಗತಿ ಬರ ಲಿಲ್ಲವೆಂದೂ, ಅದರಿಂದ ಕಲ್ಕತ್ತೆಯಲ್ಲಿನ ಈಸ್ಟ್ ಇಂಡಿಯಾ ಕಂಪೆನಿಯ ವ್ಯಾಪಾರಿಗಳೊಡನೆ ಸೇರಿ ಕೊಂಚ ವ್ಯಾಪಾರವನ್ನೂ ಸಾಗಿಸಿದನೆಂದೂ ತಿಳಿದು ಬರುತ್ತದೆ. ತನ್ನ ಹಿಂದಿನ ಉದ್ಯೋಗ ಇದೇ ಆಗಿದ್ದುದರಿಂದ ವ್ಯಾಪಾರದಲ್ಲಿ ಪ್ರಗತಿ ತೋರಿ, ಅಲ್ಲಿನ ಇಂಗ್ಲಿಷರಲ್ಲಿ ಬಳಕೆ ಬೆಳೆಸಿ ಕೊಂಡು, ಎಡ್ಮಿನಿಸ್ಟ್ರೇಟಿವ್ ಕೌನ್ಸಿಲಿನ ಒಬ್ಬ ಸದಸ್ಯನಾಗಿ ಚುನಾಯಿಸಲ್ಪಟ್ಟ. ಆದರೆ, ಈ ಸದಸ್ಯನಾಗಿ ಅವನು ಆಳ್ವಿಕೆಯ ವಿಚಾರದಲ್ಲಿ ತೋರಿದ ಸಾಹಸವೇನೂ ಗೊತ್ತಾಗಲಿಲ್ಲ. ಹಾಗೆ ಆತ ಉತ್ತಮ ಸದಸ್ಯನಾಗಿ ಮೆರೆದಿದ್ದರೆ ಅವನ ಪ್ರತಿಮೆಗಾಗಿ ಯಾರೂ ಕಳಕಳಿಸುತ್ತಿರಲಿಲ್ಲ.

ಸಿರಾಜುದ್ದೌಲನು "ಫೋರ್ಟ್ ವಿಲಿಯಮ್" ಗೆ ಮುತ್ತಿಗೆ ಹಾಕಲು ಹೋಲ್‌ವೆಲ್ ಒಂದು ಪುಟ್ಟ ಸೈನ್ಯದ ನಾಯಕನಾಗಿ ಚುನಾಯಿಸಲ್ಪಟ್ಟ. ಬೇರೆ ಯಾರೂ ಛಕ್ಕನೆ ದೊರೆಯದೆ ಇದ್ದುದ ರಿಂದ ಈತನಿಗೆ ಈ ಅಧಿಕಾರ ಕೊಡಬೇಕಾಗಿ ಬಂತು. ಅದೇ ಇತರ ಸಮಯದಲ್ಲಾಗಿದ್ದರೆ ಎಂ ದಿಗೂ ಆತನಿಗೆ ಈ ಗೌರವದ ಸ್ಥಾನ ದೊರೆಯು ತ್ತಿರಲಿಲ್ಲ. ಆದರಿಂದಲೇ ಆತ ಸಿರಾಜುದ್ದೌಲ ನಿಗೆ—ಸುಮ್ಮನೆ—ಶರಣಾಗತನಾದ. ವೈರಿಯೊ ಡನೆ ಕಾದಾಟ ಆರಂಭವಾಗುವ ಮುಂಚಿತ ವಾಗಿಯೇ ಹೋಲ್‌ವೆಲ್ ಸಂಧಾನ ಸೂಚಕ ಧ್ವಜವನ್ನು ಕೋಟೆಯ ಮೇಲಿರಿಸುವಂತೆ ಅಪ್ಪಣೆ ಕೊಟ್ಟ. ಬೇಳೆ ಕಡೆಯಿಂದ ಇವನ ಸಹಾಯಕ್ಕೆ ಇಂಗ್ಲಿಷರು ಬರಬಹುದೆಂದು ಹೋಲ್‌ವೆಲ್ ಯೋಚಿಸಿದ್ದ. ಆದರೆ, ಸೈನಿಕರನ್ನು ತರುತ್ತಿದ್ದ ದೋಣಿ "ಫ್ರಿನ್ಸ್ ಜೋರ್ಜ್" ಗಂಗಾನದಿಯಲ್ಲಿ ಮುಳುಗಿ ಹೋಯಿತು. ಸರಿ! ಬ್ರಿಟಿಷ್ ಸೇನೆಯ ಅಧಿಕಾರಿ ಹೋಲ್‌ವೆಲ್‌ನನ್ನು ದರ ದಡನೆ ಎಳೆದು ಸಿರಾಜುದ್ದೌಲನ ಮುಂದೆ ನಿಲ್ಲಿಸ ಲಾಯಿತು.

ಪೋರ್ತುಗೀಸ್ ಹಾಗೂ ಇತರ ಸೈನಿಕರು ಮನಬಂದಂತೆ ಸುತ್ತಾಡುತ್ತಿದ್ದಾಗ ಈ ಬ್ರಿಟಿಷ್ ಸೈನಿಕರ ಮೇಲೆ ಸಿರಾಜುದ್ದೌಲ ಕೈ ಮಾಡಿದ ನೆಂಬ ಸುದ್ದಿಗೆ ಬುಡವಿದೆಯೇ ತಿಳಿಯದಾದರೂ, ಬ್ರಿಟಿಷ್ ಸೇನೆ—ಇತಿಹಾಸದ ಪ್ರಕಾರ—ಸೆರೆ ಯಲ್ಲಿರಿಸಲ್ಪಟ್ಟಿತು. ಸೆರೆಯಲ್ಲಿದ್ದಾಗ ಗುಮಾಸ್ತ ನಾಗಿದ್ದ ಇಂಗ್ಲಿಷನೊಬ್ಬ ಹೋಲ್ವೆಲ್‌ನ ಕಡೆಗೆ ಬಂದು ಆತನನ್ನು ಬಿಡಿಸುವುದಾಗಿಯೂ, ಬದ ಲಾಗಿ ತಾನು ಅವನ ಸ್ಥಾನದಲ್ಲಿ ನಿಲ್ಲುವುದಾಗಿಯೂ ಹೇಳಿದನಂತೆ. ಹೋಲ್‌ವೆಲ್ ಇದಕ್ಕೊಪ್ಪಲಿಲ್ಲ ವಂತೆ. ಆ ಬಳಿಕ ೧೮ ಜನರಳಿತೆಯ ಕೋಣೆ ಯೊಂದರಲ್ಲಿ ೧೪೬ ಬ್ರಿಟಿಷ್ ಸೈನಿಕರನ್ನು ನವಾ ಬನ ಸೈನಿಕರು ಇರಿಸಿದರೆಂದೂ, ಈ ಕೋಣೆಗೆ ಅತೀ ಚಿಕ್ಕ ಎರಡು ಕಿಟಕಿಗಳು ಮಾತ್ರ ಇದ್ದು ವೆಂದೂ, ಇಂಗ್ಲಿಷರು ಬರೆದ ಕತೆಯಿಂದ ಗೊತ್ತಾ ಗಿದೆ. ಗುಮಾಸ್ತೆ ಲೀಚ್ ಉಪಕಾರಮಾಡಲು ಬಂದಾಗ ನಿರಾಕರಿಸಿ, ತಾನು ಇತರರೊಡನೆ ಸಾಯುವುದೇ ಸರಿ, ಎಂದು ಸಾರಿದ ಅಸಮಾನ ವೀರ ಇದೀಗ ಜೀವ ಉಳಿಸಿಕೊಳ್ಳಲು ಕೋಣೆಯ ಕಿಟಕಿಯ ಬಳಿ ನಿಂತು ಉಸಿರಾಡಲು ಬಗೆದ. ಇಲ್ಲಿ ಆತನಿಗೆ ಉಸಿರಾಡಲು ಅಲ್ಪಸ್ವಲ್ಪ ಎಡೆ ಸಿಕ್ಕಿತಾದರೂ, ಉಳಿದ ಮಂದಿ ಗಾಳಿ ಇಲ್ಲದೆ ಉಸಿರು ಕಟ್ಟಿ ನರಳುತ್ತಿದ್ದರು. ಈ ಕೋಣೆ ಯಲ್ಲಿ ಅಬಲೆಯಾದ ಶ್ರೀಮತಿ ಕಾರೇ ಎಂಬವಳ ಪ್ರಾಣಕ್ಕಿಂತಲೂ ತನ್ನ ಪ್ರಾಣವೇ ಹೆಚ್ಚಿನದೆಂದು ಹೋಲ್‌ವೆಲ್ ತಿಳಿದು ವರ್ತಿಸಿದ. ಬೇರೆಯ ವರು ಕಿಟಕಿಯ ಬಳಿ ಬರದಂತೆ ಕಿಟಕಿಯ ಸರ ಳನ್ನು ಬಲವಾಗಿ ಹಿಡಿದು ತನ್ನನ್ನು ತಾನು ಆದ ರಿಸಿ ನಿಂತುಕೊಂಡು, ಬಾಯಾರಿ, ದಣುವಾಗಿ ಹೋಲ್‌ವೆಲನೂ ಸಂಕಟಪಟ್ಟ. ಬಾಯಾರಿಕೆ ತಣಿಸಲೆಂದು ಇತರರು ಈತನ ಬೆವರನ್ನು ಕುಡಿ ಯಲು ಮುಂದಾದಾಗ, ಹೋಲ್‌ವೆಲ್ ತನ್ನ ಅಂಗಿಯ ಕೈಗಳನ್ನು ಚೀಪಲು ತೊಡಗಿದ; ಬಾಯಾರಿಕೆ ತಣಿಸಿಕೊಳ್ಳಲೆಳಸಿದ. ಅಂತೂ ಕೊನೆಗೆ ಹೋಲ್‌ವೆಲ್‌ನ ಕೈ ಕಿಟಕಿಯ ಸರ ಳನ್ನು ಬಿಟ್ಟಿತು. ಅಲ್ಲೇ ಉರುಳಿ ಬಿದ್ದ. ಅಂತೂ ಮರುದಿನ ತನಕ ಬದುಕಿದ್ದ. ಈ ಎಲ್ಲಾ ವಿಚಾರ ಗಳನ್ನು ಆಂಗ್ಲ ಲೇಖಕರೇ ಬರೆದಿಟ್ಟಿದ್ದಾರೆ. ಆದರೆ ಪ್ರತಿಯೊಬ್ಬನ ಬರಹವೂ, ಕತ್ತಲೆ ಕೋಣೆಯೊಳಗೆ ಹೋಲ್‌ವೆಲ್ ಸಂಪೂರ್ಣ ಸ್ವಾರ್ಥದಿಂದ ವರ್ತಿಸಿ, "ಇತರರಿಗಾಗಿ ತನ್ನ ಜೀವವನ್ನು ಧಾರೆ ಎರೆಯಲು" ಹವಣಿಸಲಿಲ್ಲ.

ಅಂತಹ ವ್ಯಕ್ತಿಗೆ ಬ್ರಿಟಿಷರು ಅದೇಕೆ ಪ್ರತಿಮೆ ಯನ್ನು ನಿಲ್ಲಿಸಿದರೆಂಬುದು ತಿಳಿಸಿ ಬರುವುದಿಲ್ಲ; ಬದಲಾಗಿ ಲೀಚ್‌ನ ಪ್ರತಿಮೆಯನ್ನು ನಿಲ್ಲಿಸಿದ್ದರೆ ಆಕ್ಷೇಪಕ್ಕೆ ಎಡೆಯಾದರೂ ಇರಲಿಲ್ಲವೆನ್ನಬಹು ದಾಗಿದೆ. ಕಾರಣ, ಮೊದಲು ಸೆರೆಯಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದ ಲೀಚ್ ಹೋಲ್‌ವೆಲನನ್ನು ಬದುಕಿಸುವುದಕ್ಕಾಗಿಯೇ ಹಿಂತಿರುಗಿ, ಸೆರೆ ಹಿಡಿಯಲ್ಪಟ್ಟು ಕತ್ತಲೆ ಕೋಣೆ ಯಲ್ಲಿ ಮಡಿದ!

ಸರಿ! ಸಿರಾಜುದ್ದೌಲನ ಮುಂದೆ ಬಳಲಿ, ಬೆಂಡಾಗಿ ಹೋಲ್‌ವೆಲ್ ಬಂದು ನಿಂತ. ನವಾ ಬನು ಆತನನ್ನು ಕುಳ್ಳಿರಿಸಿ, ಬಾಯಾರಿಕೆ ಕೊಟ್ಟು ಉಪಚರಿಸಿದನು. ಹೋಲ್‌ವೆಲ್ ಹಿಂದಿನ ಅಂದರೆ ೧೭೫೬ನೇ ಜೂನ್ ತಿಂಗಳ ೨೦ನೇ ತಾರೀಕಿನ ದಿನದ ರಾತ್ರೆ ಅದೇನು ನಡೆ ಯಿತೆಂದು ಹೇಳಿದ. ನವಾಬನು ಈ ಕಂತೆ ಪುರಾಣಗಳನ್ನೆಲ್ಲ ಕಿವಿಯಲ್ಲಿ ಹಾಕಿಕೊಳ್ಳದೆ, ಬ್ರಿಟಿಷರು ತಾವು ಸುಲಿದ ಅಮೂಲ್ಯ ಬಂಗಾರ ರತ್ನಗಳನ್ನೆಲ್ಲ ಎಲ್ಲಿ ಅಡಗಿಸಿ ಇರಿಸಿರುವರೆಂದು ಹೇಳಬೇಕೆಂದು ಅಪ್ಪಣೆಕೊಡಲು, ಹೋಲ್‌ವೆಲ್ ಅದಾವುದೂ ಉಳಿದಿಲ್ಲವೆಂದು ಉತ್ತರವಿತ್ತ. ಮುಂದೆ ಹೋಲ್‌ವೆಲ್ ಹಾಗೂ ಆತನೊಡನೆ ಬದುಕಿ ಉಳಿದಿದ್ದವರು ಬಿಡುಗಡೆ ಮಾಡಲ್ಪ ಟ್ಟರು. ಬದುಕಿದೆನೆಂದು ಹೋಲ್‌ವೆಲ್ ಇಂ ಗ್ಲಾಂಡಿಗೆ ಕೂಡಲೇ ಹಿಂತಿರುಗಿದ!

ಮುಂದೆ ಹೋಲ್‌ವೆಲ್ ಇಂಗ್ಲಾಂಡಿನಲ್ಲಿ ಏನು ಮಾಡಿಕೊಂಡಿದ್ದನೆಂಬ ವಿಚಾರವಾಗಿ ಸರಿ ಯಾಗಿ ತಿಳಿದಿಲ್ಲವಾದರೂ, ಕ್ಲೈವನು ಮಾಡಿದ ಅಕೃತ್ಯಗಳ ಕುರಿತಾಗಿ ಆತನ ಮೇಲೆ ಕಂಪೆನಿ ಯವರು ಆರೋಪಣೆಗಳನ್ನು ಹೊರಿಸಲು, ಹೋಲ್‌ವೆಲ್ ಕ್ಲೈವನ ಪರವಾಗಿ ವಾದಿಸಿದ.

ಇಂಗ್ಲಿಷ್ ಇತಿಹಾಸಕಾರರ ಹೇಳಿಕೆಯ ಆಧಾರದ ಮೇಲೆ, ಹೋಲ್‌ವೆಲನ ಭಾರತೀಯ ಜೀವನ ವಿಚಾರವನ್ನು ಅವಲೋಕಿಸಿದವರಿಗೆ, ಈ ದೇಶದಲ್ಲಿ ಆತನ ಪ್ರತಿಮೆ ಇರಿಸಲು ಯೋಗ್ಯ ವಾದ ಸದ್ಗುಣಗಳು ಆತನಲ್ಲಿ ಕಂಡು ಬರು ವುದೇ ತಿಳಿಯದು. ಅಂತೂ ಕತ್ತಲಕೋಣೆಯ ಹತ್ಯಾಕಾಂಡ ನಡೆಯಿತೆಂದು ಊಹಿಸಿ, ಹೋಲ್ ವೆಲನ ಸ್ಮರಣಾರ್ಥವಾಗಿ ಈ ಪ್ರತಿಮೆ ಇರಿಸಲಾ ಗಿದೆ. ಅಲ್ಲದೆ, ಕತ್ತಲ ಕೋಣೆಯೆ ಕೃತ್ಯ ಒಬ್ಬ ಮುಸ್ಲಿಂ ಅರಸನದು. ಮುಸ್ಲಿಮನಾಗಲಿ—ಹಿಂದೆ ವಾಗಿರಲಿ—ನಾವಿಂದು ಮೊದಲು ಭಾರತೀಯರು ಎಂಬುದನ್ನು ಅರಿತು, ಇತಿಹಾಸದ ಸತ್ಯತೆಯ ನ್ನುಳಿಸಲು, ಯತ್ನಿಸಲೇ ಜೋಕಾಗದೆ.

(ಇಂಡಿಯನ್ ಎಕ್ಸ್‌ಪ್ರೆಸ್)

ಮೈಸೂರು
ಸಾಬೂನು
ಇಪ್ಪತ್ತು ವರ್ಷದ ತಯಾರಿಕೆ ಅನುಭವ
ನೈರ್ಮಲ್ಯವು
ಒಳ್ಳೆ
ಅಭ್ಯಾಸದ ಪರಿಣಾಮ
ನಿಮ್ಮ ಮೈ ಮತ್ತು ಬಟ್ಟೆಗಳನ್ನು
ಶುಚಿ ಮಾಡಲು
ಮೈಸೂರು
ಸಾಬೂನುಗಳು ಕಾದಿವೆ.
ಮೈಸೂರು ಸಾಬೂನುಗಳು ಸರಕಾರದ
ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ
ಬೆಂಗಳೂರಿನಲ್ಲೇ ತಯಾರಾಗುತ್ತಿವೆ.



ಮೈಸೂರು
ಸ್ಯಾಂಡಲ್ ಸೋಪ್

PANDIT BANK,
MANGALORE.
ಪಂಡಿತ್ ಬೇಂಕ್,
ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್, ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳು ವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯು ವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತುಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿಯದು ಆಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ	ಶೇಕಡಾ 1½ %
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿರಖು ಠೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ	ಶೇಕಡಾ 4½ %

PANDIT SHIVA RAO, B.A., LL.B.,
PROPRIETOR.
PANDIT SANJIVA RAO, B.A.
AGENT.

ವಿದೇಶ

ಸ್ಪೈನಿನ ಧರ್ಮ ಸಂಕಟ

ಸ್ಪೈನನ್ನು ಈ ಯುದ್ಧದಲ್ಲಿ ತನ್ನ ಕಡೆಯಿಂದ ಸೇರುವಂತೆ ಮಾಡಲು ಹಿಟ್ಲರ್ ಅಸಮಾನ ರೀತಿಯಿಂದ ಯತ್ನಿಸುತ್ತಿದ್ದಾನೆ. ಅಲ್ಲದೆ, ಸ್ಪೈನಿನ ಫ್ರೆಂಚ್ ಗಡಿಯಲ್ಲಿ ಬೇಕಷ್ಟು ಸೈನ್ಯವನ್ನು ಇರಿಸಿರುವನಂತೆ ಫ್ರಾಂಕೊ–ಹಿಟ್ಲರನ ಜೊತೆಗೆ ಸೇರದಿದ್ದರೆ, ಜರ್ಮನಿಯು ಸ್ಪೈನನ್ನು ಹಾದು ಜಿಬ್ರಾಲ್ಟರನ್ನು ಹಿಡಿವ ಸಾಹಸಕ್ಕೆ ಕೈಯಿಕ್ಕಬಹುದೆಂದೂ, ಹಿಟ್ಲರನಿಂದಾಗಿ ಪ್ರಜಾ ಸರಕಾರವನ್ನು ಸೋಲಿಸಿ, ಸರ್ವಾಧಿಕಾರಿ ಸರಕಾರ ಸ್ಥಾಪಿಸಿದ ಈತನೇ, ಹಿಟ್ಲರನಿಗೆ ಮುಂದೆ ಆಹುತಿಯಾಗಲೂ ಬಹುದೆಂಬ ಶಂಕೆಯೂ ಇದೆ.

ಚೀನದ ಯುದ್ಧಾರಂಭ ದಿನ

ಜಪಾನು ಚೀನದೊಡನೆ ಯುದ್ಧ ಆರಂಭಿಸಿದ ದಿನದ ಮೂರನೇ ವರ್ಧಂತಿಯು ಜಪಾನಿನಲ್ಲೆಲ್ಲಾ ಒಂದು ನಿಮಿಷದ ಮೌನದ ಮೂಲಕ ಆಚರಿಸಲ್ಪಟ್ಟಿತು.

ಚೀನಾದಲ್ಲಿ

ಯುದ್ಧಾರಂಭದ ಮೂರನೇ ವರ್ಧಂತಿಯ ದಿನ್ನೆ, ಸ್ವಾತಂತ್ರ್ಯಕ್ಕಾಗಿ ಮಡಿದವರ ಸ್ಮರಣಾರ್ಥ ವಾಗಿ ಎಲ್ಲೆಲ್ಲೂ ಸಭೆಗಳು ಜರುಗಿ, "ರಾಷ್ಟ್ರದ ಕಡೆಗಟ್ಟಿನ ದಿನ" ಆಚರಿಸಲ್ಪಟ್ಟಿತು.

ಜರ್ಮನಿಯ ಯೋಜನೆ

ಹಿಟ್ಲರನು ಬರ್ಲಿನ್‌ನಲ್ಲಿ ತನ್ನ ಮಂತ್ರಿಮಂಡಲದೊಡನೆ ಬ್ರಿಟನ್ನಿಗೆ ಮುತ್ತಿಗೆ ಹಾಕುವ ನಿಧಾನ, ಫ್ರಾನ್ಸ್ ಶರಣಾಗತವಾದುದರ ವಿಚಾರ, ಬಾಲ್ಕನಿನ ಪರಿಸ್ಥಿತಿ ಹಾಗೂ ಭಾವೀ ಯುರೋಪಿನ ವಿಷಯಗಳ ಕುರಿತಾಗಿ ಚರ್ಚಿಸಿದನೆಂದು ಪ್ರಕಟವಾಗಿದೆ.

ರುಮೇನಿಯ

ಇಲ್ಲಿಂದ ಬ್ರಿಟನ್ನಿಗೆ ಹೋಗುತ್ತಿದ್ದ ಪೆಟ್ರೋಲಿನ ರಫ್ತು ನಿಂತಿದೆ. ಇಲ್ಲಿ ವಾಸವಾಗಿದ್ದ ಬ್ರಿಟಿಷರೆಲ್ಲ ಖಿಡಾರ ತೆಗೆದಿದ್ದಾರೆ.

ದೊಬ್ರುಜಾ

ಬಲ್ಗೇರಿಯದಿಂದ ರುಮೇನಿಯವು ಸೆಳೆದು ಕೊಂಡ ದೊಬ್ರುಜಾ ಎಂಬ ಪ್ರದೇಶವನ್ನು, ಬಲ್ಗೇರಿಯ ಹಿಂದಕ್ಕೆ ಕೇಳುತ್ತಿದೆ. ಬಲ್ಗೇರಿಯಾ–ರಷ್ಯಗಳೊಳಗೆ ಅನ್ಯೋನ್ಯತೆಯ ಸಂಧಿಯಾಗಿರುವದರಿಂದ ಬಲ್ಗೇರಿಯದ ಕೇಳಿಕೆಯನ್ನು ರಷ್ಯ ಬಲ ಪಡಿಸಿದೆ. ರಷ್ಯದ ನೌಕಾ ಪಡೆ, ಕಪ್ಪು ಸಮುದ್ರದಲ್ಲಿ, ಬಲ್ಗೇರಿಯದ ಕರಾವಳಿಯಲ್ಲಿ ಗಸ್ತು ಹಾಕುತ್ತಿದೆ.

ರುಮೇನಿಯ

ಇಟಲಿ–ಜರ್ಮನಿಗಳ ಕಡೆಗೆ ಇಲ್ಲಿನ ಸರಕಾರ ಬಾಗಿದುದರ ಪರಿಣಾಮ ಕಠಿನವಾಗಿದೆ. ಅಯರ್ನ್–ಗಾರ್ಡ್ ದಳದ ಸರಕಾರದಲ್ಲಿನ ಪ್ರತಿನಿಧಿಗಳು ರಾಜೀನಾಮೆ ಕೊಟ್ಟಿದ್ದಾರೆ. ಯೆಹೂದಿಯರಿಗೆ ಮುಂದೆ ಪತ್ರಿಕೆ ನಡೆಸುವ ಅಧಿಕಾರ ವಿಲ್ಲವೆಂದೂ ಪ್ರಕಟವಾಗಿದೆ.

ಹಂಗೇರಿ

ಹಂಗೇರಿಯು, ರುಮೇನಿಯವು ಹಿಂದೆ ಸೆಳೆದುಕೊಂಡಿದ್ದ ಟ್ರಾನ್ಸಿಲ್‌ವೇನಿಯ ಪ್ರಾಂತ್ಯವನ್ನು ಹಿಂತಿರುಗಿ ಕೇಳುವದನ್ನು ಬಿಟ್ಟಿಲ್ಲ.

ಸೀರಿಯ

ಫ್ರೆಂಚ್ ಸರಕಾರದ ಅಂಕೆಗೆ ಬಾಗಿದ್ದ ಸೀರಿಯದ ಸ್ವಾತಂತ್ರ್ಯ ವೀರನ ಕೊಲೆಯಾಗಿದೆ. ಅಧಿಕಾರ ದರ್ಪದಿಂದ ಅಧಿಕಾರಿಗಳು ಕಾರ್ಯ ನಡೆಸಿದರೂ ಕೂಡ, ಸೈನಿಕರಿಗೆ ಕಾದಾಟ ನಿಂತು ದರಿಂದ ಬೇಸರವಾಗಿರಬಹುದೆಂದು ವಾರ್ತೆ!

ಬ್ರಿಟನ್–ಜಪಾನ್

ಚೀನಕ್ಕೆ ಆಯುಧ ಸಾಮಗ್ರಿಗಳನ್ನು ಬ್ರಿಟನ್ ಹೋಗದಂತೆ ಮಾಡಬೇಕೆಂಬ ಜಪಾನಿನ ಆಕ್ಷೇಪಕ್ಕೆ ಉತ್ತರವಾಗಿ ಬ್ರಿಟನ್ನೇ ತಾವು ಅದಾವ ಆಯುಧವನ್ನೂ ಕಳುಹಿಸುತ್ತಲೇ ಇಲ್ಲವೆಂದೂ, ಕಳುಹಿಸುವವರೆಗೆ ಸಹಕಾರಿಗಳಾಗಿಲ್ಲವೆಂದೂ ಒಂದು ಉತ್ತರ ಕೊಟ್ಟಿದೆ. ಇದರಿಂದ ಜಪಾನಿಗೆ ಬೇಸರವಾಗಿದೆ!

ಸಾವಿರ ಮೈಲಿ [illegible]

[illegible] ಸಾವಿರ ಮೈಲಿಯ ಪವನುಗಳ [illegible] ಯೋಚಿ

"ಮೃದುವಾಗಿ, ಸುಂದರವಾಗಿ ಕೋಮಲತೆಯನ್ನು ತೋರ್ಪಡಿಸುವ ದೇಹ ಸೌಂದರ್ಯವು ಪ್ರತಿಯೊಬ್ಬ ಹೆಂಗುಸಿಗೂ ಆತ್ಯಾವಶ್ಯಕವಾದ ಆಭರಣವಾಗಿದೆ. ಮನಃಪೂರ್ವಕವಾಗಿ ಲಕ್ಸ್ ಟಾಯಿಲೆಟ್ ಸಾಬೂನನ್ನು ಉಪಯೋಗಿಸಿದುದರಿಂದ ನನ್ನ ಚರ್ಮವು ಅತೀ ಸುಂದರವಾಗಿ ಉಳಿದಿದೆ ಯೆಂಬುದು ನನ್ನ ಅಭಿಪ್ರಾಯ. ಆ ಸಾಬೂನು ಯಾವಾಗಲೂ ಅತೀ ನುಣುಪಾಗಿ ಶುಭ್ರವಾದದೆ." ಇದು ಸಾಮುವೆಲ್ ಗೋಲ್ಡ್‌ವಿನ್‌ರವರ ವಿಖ್ಯಾತ ನಟಮಣಿಯಾದ ಮರಿಯಮ್ ಹಾಪ್ಕಿನ್ಸ್‌ಳ ಮಾತುಗಳು.

ಸಿನೆಮಾ ನಟಿಯರಿಗೆ ಅಂದವಾದ ಮೈಬಣ್ಣವು ಅಗತ್ಯ. ಆದುದರಿಂದಲೇ ಪ್ರಪಂಚದ ಅನೇಕಮಂದಿ ಪ್ರಸಿದ್ಧ ಸಿನೆಮಾ ನಟಿಯರು ತಮ್ಮ ಅಂಗ ಸೌಂದರ್ಯ ರಕ್ಷಣೆಗಾಗಿ ನಿರಂತರವೂ ಲಕ್ಸ್ ಟಾಯಿಲೆಟ್ ಸೋಪನ್ನು ಉಪಯೋಗಿಸುತ್ತಾರೆ.

ಪ್ರಪಂಚದ ಪ್ರಸಿದ್ಧ ಚಲನಚ್ಚಿತ್ರಶಾಲೆಗಳಲ್ಲೆಲ್ಲಾ ಸಾಧಾರಣವಾಗಿ ಲಕ್ಸ್ ಟಾಯಿಲೆಟ್ ಸೋಪು ಅಂಗಸೌಂದರ್ಯವನ್ನುರಕ್ಷಿಸುವುದೆಂದು ಪ್ರಖ್ಯಾತಿ ಪಡೆದಿದೆ. ಅದರ ಬೆಣ್ಣೆಯಂತಹ ನೊರೆಯು ಚರ್ಮದೊಳಕ್ಕೆ ನಾಟಿ, ಮಣ್ಣನ್ನೂ, ಕೊಳೆಯನ್ನೂ ಮೆಲ್ಲಗೆ ಮತ್ತು ಸಂಪೂರ್ಣವಾಗಿ ತೆಗೆಯುತ್ತದೆ. ಲಕ್ಸ್ ಟಾಯಿಲೆಟ್ ಸೋಪನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಅಂಗ ಸೌಂದರ್ಯವು ಸುರಕ್ಷಿತೆವಾಗಿರುವುದು. ಮತ್ತು ಇಂಡಿಯದ ಅತ್ಯಂತ ಜನಾದರಣೀಯವಾದ ಟಾಯಿಲೆಟ್ ಸೋಪೆಂದು ನಿರ್ಧರಿಸಲ್ಪಟ್ಟ ಈ ಸೋಪಿನ ಪರಿಮಳವು ಬಹಳ ಸಮಯ ಮೈಯಲ್ಲಿನಿಂತು, ಮನೋಲ್ಲಾಸಕರವಾಗಿಯೂ ಆಕರ್ಷಕವಾಗಿಯೂ ಇರುವುದು.

ಲಕ್ಸ್ ಟಾಯಿಲೆಟ್ ಸೋಪು

LTS. 21-206—KN LEVER BROTHERS (INDIA) LIMITED

ಚೀನೀ ಸಮರ

ಕಳೆದ ಮೂರು ವರ್ಷಗಳ ಚೀನೀ ಸಮರದಲ್ಲಿ ಸತ್ತ ಹಾಗೂ ಗಾಯಗೊಂಡ ಜಪಾನಿಯರು ೧೬ ಲಕ್ಷ. ಕಳೆದ ಮೇ ತನಕ ಚೀನೀಯರು ವಶಪಡಿಸಿಕೊಂಡ ಫೀಲ್ಡ್ ಗನ್‌ಗಳು ೬೬೦, ಮೆಶಿನ್ ಗನ್‌ಗಳು ೩೩೦೦ ಮತ್ತು ರೈಫಲ್‌ಗಳು ೬೯೦೦೦. ಯುದ್ಧಾರಂಭದಲ್ಲಿ ಚೀನದಲ್ಲಿದ್ದ ಸೇನೆ ೨ ಮಿಲಿಯ. ಈಗಿರುವ ಸೇನೆ ೫ ಮಿಲಿಯ. ಅಲ್ಲದೆ ಹಲವು ಮಿಲಿಯ ಮಂದಿ ತರಬೇತಿ ಹೊಂದುತ್ತಿದ್ದಾರೆ.

ಪಂಜಾಬ್ ಎಸೆಂಬ್ಲಿ

ಇದೇ ಜುಲ್ಯಾ ತಾ. ೧೫ರಲ್ಲಿ ನಡೆಯಲಿರುವ ಪಂಜಾಬ್ ಶಾಸನ ಸಭೆಯ ಅಧಿವೇಶನವು "ಗುಪ್ತವಾಗಿ ನಡೆಯಬೇಕೆ"ಂದು ಅಲ್ಲಿನ ಪ್ರಧಾನರು ಸೂಚಿಸಿದ್ದಾರೆ.

ಪಬ್ಲಿಕ್ ಸ್ಕೂಲುಗಳ ಕಾನ್ಫರೆನ್ಸ್

ವಿದ್ಯಾರ್ಥಿಗಳ ಅವರ ಮುಂದಿನ ಜೀವನದಲ್ಲಿ ನಾಯಕತ್ವದ ಹಾಗೂ ಜವಾಬ್ದಾರಿಯ ಸ್ಥಾನಗಳಲ್ಲಿ ಕೆಲಸ ಮಾಡುವ ಹಾಗೆ ಶಿಕ್ಷಣಕೊಡುವ ಉದ್ದೇಶದಿಂದ "ಇಂಡಿಯನ್ ಪಬ್ಲಿಕ್ ಸ್ಕೂಲ್ ಕಾನ್ಫರೆನ್ಸ್" ಎಂಬ ಹೊಸ ವಿದ್ಯಾ ಸಂಸ್ಥೆಯೊಂದು ಬೊಂಬಯಿಯಲ್ಲಿ ಹೊರಟಿದೆ. ಸದ್ಯಕ್ಕೆ ೮ ಪಬ್ಲಿಕ್ ಶಾಲೆಗಳು ಇದಕ್ಕೆ ಸೇರಿವೆ. ರಾಯ್ಪುರದ ರಾಜಕುಮಾರ ಕಾಲೇಜಿನ ಪ್ರಿನ್ಸಿಪಾಲ್ ಮಿ. ಸ್ಮಿತ್ ಪಿಯರ್ಸಿಯವರು ಇದರ ಚೆಯರ್‌ಮ್ಯಾನರು.

ಸಮಗ್ರ ಭಾರತ ಕಾಂಗ್ರೆಸ್ ಕಮಿಟಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದಿನ ಅಧಿವೇಶನವು ಪೂನೆಯಲ್ಲಿ ಇದೇ ಜುಲ್ಯಾ ತಾ. ೨೫ರಲ್ಲಿ ಆರಂಭವಾಗುವುದು. ಸಮಗ್ರ ಭಾರತ ಕಾಂಗ್ರೆಸ್ ಕಮಿಟಿಯ ವಿೂಟಂಗೂ ಪೂನೆಯಲ್ಲಿ ಜುಲ್ಯಾ ತಾ. ೨೭ರಲ್ಲಿ ನಡೆಯುವುದು.

ಶ್ರೀ. ಎನ್. ಎಂ. ಜೋಶೀಯವರು

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವೈಸ್ ಪ್ರೆಸಿಡೆಂಟರೂ, ಕೇಂದ್ರದ ಎಂ.ಎಲ್.ಎ. ಗಳೂ ಆಗಿರುವ ಎನ್. ಎಂ. ಜೋಶಿಯವರು, ಸಂಘದ ಹಲವು ಮೆಂಬರರಿಗೂ ಪತ್ರಗಳು ಉಂಟಾದ ಭಿನ್ನಾಭಿಪ್ರಾಯದ ದೆಸೆಯಿಂದ, ಆ ಸೊಸೈಟಿಯ ಸಂಬಂಧವನ್ನು ತ್ಯಜಿಸಿರುತ್ತಾರೆ.

Swastik

KANTI

A LOVELY SOAP FOR FLAWLESS COMPLEXION

ಹಿಂದೂಸ್ಥಾನದಲ್ಲಿನ ಉತ್ತಮವಾದ ನಿರ್ಮಲ ಹಾಗೂ ಸೌಂದರ್ಯ ಗೊಳಿಸುವ ತೈಲಗಳ ವಿಕತ್ರ ಮಾಡಿದ ಸಾರಗಳಿಂದ ತಯಾರಿಸಲ್ಪಟ್ಟ ಕಾಂತಿ ಟ್ಯೊಲೆಟ್ ಸಾಬೂನು ಕರಗಿ, ರಂಧ್ರಗಳಿಂದ ಕೊಳೆ ಮತ್ತು ಬೆವರಿನ ಕ್ರುತಿಯೊಂದು ಕುರುಹನ್ನೂ ನಿವಾರಿಸಿ, ಚರ್ಮವನ್ನು ಶುಭ್ರವಾಗಿಯೂ, ಮೃದು ಹಾಗೂ ರಮಣೀಯವಾಗಿಯೂ ಇರಿಸುತ್ತದೆ.

ನಿಮ್ಮ ಚರ್ಮವನ್ನು ಒಣಗಿಸುವ ಹಾಗೂ ದೊರಗುಗೊಳಿಸುವ, ಪ್ರಾಣಿಗಳ ಕೊಬ್ಬನ್ನುಳ್ಳ ಕಠಿಣತರವಾದ ರಸಾಯನಿಕ ಸಾಬೂನುಗಳನ್ನೇಕೆ ಉಪಯೋಗಿಸುವಿರಿ. ಸಮಶೀತೋಷ್ಣವಲಯಗಳಲ್ಲಿ ಅವು ಚರ್ಮಗಳಿಗೆ ಉತ್ತಮವಾಗಿರಬಹುದು ಆದರೆ ಕಾಂತಿ ಟ್ಯೊಲೆಟ್ ಸಾಬೂನು ಉಷ್ಣವಲಯದಲ್ಲಿನ ಚರ್ಮಗಳಿಗೆ ಆದರ್ಶಮಯವಾದ ಚರ್ಮ ಹಾಗೂ ಮೈಬಣ್ಣದ ಸಾಬೂನಾಗಿರುತ್ತದೆ

ಇಂದೇ ೩ ತುಂಡುಗ್ಳಿರುವ ಪೆಟ್ಟಿಗೆಯನ್ನು ಕೊಳ್ಳಿ; ಉಪಯೋಗಿಸಲು ಆರಂಭಿಸಿ,—

848

KANTI SOAP FOR COMPLEXION

SWASTIK OIL MILLS, LTD. BOMBAY 15

ಮಲೇರಿಯಾ ಪೀಡಿತರಿಗೆ ಪರಿಹಾರ

ಭಯಂಕರ ಪರಿಣಾಮಗಳು ನಿವಾರಿಸಲ್ಪಟ್ಟವು

ಇಂಡಿಯಾದಲ್ಲಿ ಸಾಯುವವರ ಪೈಕಿ ಅರರಲ್ಲಿ ಒಬ್ಬ ಮಲೇರಿಯಾದ ಬಲಿ. ಈಗೀಗ ಈ ಭಯಂಕರ ವಿಪತ್ತನ್ನು ಯಾವ ರೀತಿ ಎದುರಿಸಬೇಕೆಂಬುದನ್ನು ವೈದ್ಯರು ಕಂಡುಹಿಡಿಯುತ್ತಿರುವರು. ಜ್ವರದಿಂದ ಶಕ್ತಿಗುಂದಿದ ಶರೀರವನ್ನು ಪೋಷಿಸುವ ಆಹಾರದಿಂದ ಪುನಃ ದೃಢೀಕರಿಸಬೇಕು. ಅದರೆ ಜ್ವರವು ಜಠರವನ್ನು ದುರ್ಬಲಗೊಳಿಸಿ ಗಟ್ಟಿ ಆಹಾರಗಳನ್ನು ಜೀರ್ಣಿಸದಂತೆ ಮಾಡುವುದು.

ಅನೇಕ ಶಯ್ಯಾಗತ ಪರೀಕ್ಷೆಗಳಿಂದ ಲಘುವಾಗಿದ್ದರೂ ಪೂರ್ಣ ಪೋಷಣೆಯನ್ನು ಕೊಡತಕ್ಕ ವಸ್ತು ಒಂದನ್ನು ವೈದ್ಯರು ಕಂಡುಹಿಡಿದರು. ಅದೇ ಹಾರ್ಲಿಕ್ಸ್ ಆಹಾರ. ಶಿಥಿಲವಾದ ಶರೀರಕ್ಕೆ ಪರಿಗಳನ್ನು ರಚಿಸಿ ನವ ಚೈತನ್ಯವನ್ನು ರಕ್ತಕ್ಕೂ ನರಗಳಿಗೂ ಕೊಡತಕ್ಕ ಸಮಸ್ತ ಸಾರಗಳನ್ನೂ ಹಾರ್ಲಿಕ್ಸು ಒಳಗೊಂಡಿರುವುದು. ಆಸ್ಪತ್ರೆಗಳಲ್ಲಿ ಜ್ವರ ರೋಗಿಗಳಿಗೆ ಹಾರ್ಲಿಕ್ಸನ್ನು ಪಥ್ಯವಾಗಿ ಕೊಡುವರು. ಅನೇಕಾನೇಕ ಪಾಡುಪಟ್ಟ ಪೀಡಿತರು ತಮ್ಮ ಜೀವದಾನಕ್ಕೆ ಈ ಅದ್ಭುತವಾದ ಆಹಾರಕ್ಕೆ ಋಣ ಬದ್ಧರಾಗಿರುವರು.

50 ವರ್ಷಗಳಿಂದ ಜಗತ್ಪ್ರಸಿದ್ಧ

ಮದನಮಂಜರಿ

ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ. ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ

ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ನಿರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ

184, ಚೈನಾ ಬಜಾರ್, ಮದ್ರಾಸ್.

You Can Write a Book.

"Certainly not" you will probably say. But hear this. A great author was once asked to name his favourite work. He replied immediately "My bank pass book"!

You too can write a book; not a novel perhaps or a poem but one like this author's favourite—the true story of a man who keeps his money matters in order. And a very interesting story it will prove.

Estd. 1906

RESOURCES OF A CRORE

CANARA BANK LIMITED

ಕಂಠೀರವ

KANTEERAVA

KANARESE, BI-WEEKLY

XXII] ಮಂಗಳೂರು, ತಾರೀಕು ೧೨—೭—೧೯೪೦ [೩೦

೧೯೬೨ ವಿಕ್ರಮ ಸಂವತ್ಸರದ ಆಷಾಢ ಶು। ೮ ಶುಕ್ರವಾರ

ಮಹಾತ್ಮರ ಸ್ಪಷ್ಟೋಕ್ತಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಭಾರತದ ಹಾಗೂ ಕಾಂಗ್ರೆಸಿನ ಯುದ್ಧದ ಕಡೆಗಿರುವ ತನ್ನ ಧ್ಯೇಯವನ್ನು ಪುನಃ ವ್ಯಕ್ತಪಡಿಸಿ, ಸ್ವಾತಂತ್ರ್ಯದ ಕುರುಹು ಇಲ್ಲದೆ ಸಹಕಾರವಿಲ್ಲವೆಂದಿದೆ. ಈ ವಿಚಾರವಾಗಿ ಮಹಾತ್ಮಾಜೀಯವರು ಹೇಳಿಕೆ ಹೊರಡಿಸಿ, ವಿಷಯಗಳನ್ನು ವಿವರಿಸಿದ್ದಾರೆ.

ವರ್ಕಿಂಗ್ ಕಮಿಟಿಯು ತನ್ನ ಸಾಹಸಯುಕ್ತವಾದ ಠರಾವನ್ನು ತನ್ನ ಮುಂದೆಯೇ ಮುಂಜೂರುಮಾಡಿತ್ತೆಂದೂ, ಅದು ಪ್ರಕಟಿಸಲ್ಪಟ್ಟ ವಿಚಾರ ಇದೀಗ ತನಗೆ ತಿಳಿಯಿತೆಂದೂ ಮಹಾತ್ಮರು ಹೇಳುತ್ತಾ "ಸದಸ್ಯರು ಈ ಒಂದು ಠರಾವಿಗಾಗಿ ೫ ದಿನಗಳ ತನಕ ಹರಟೆ ಹೊಡೆದರೆಂದು ಅಭಿಪ್ರಾಯ ಪಡುವುದು ತಪ್ಪು. ಅವರು ಮಹತ್ತಾದ ಜವಾಬ್ದಾರಿಯನ್ನು ಪೂರೈಸಬೇಕಾಗಿತ್ತು. ನ್ಯಾಯವಾಗಿ ಇಂದಿನ ಠರಾವು ರಾಮಘಡ ಠರಾವಿಗಿಂತ ವ್ಯತ್ಯಾಸವಾಗಿಲ್ಲವಾದರೂ, ಇದರಲ್ಲಿ ಅಡಕವಾದ ಗೂಢ ಬೇರೆಯಾಗಿದೆ." ಅಕ್ಷರಗಳು ಹಿಂದಿನದರಂತೆ ಕಂಡುಬಂದರೂ ಇದರಲ್ಲಿ ಕೊಂಚ ವ್ಯತ್ಯಾಸವೂ, ಸಂಧಾನಕ್ಕೆ ಸಹಕಾರಿಯಾದ ವಿಚಾರವೂ ಇದೆಯೆಂದೂ, ಬ್ರಿಟನ್ನಿಗೆ ನಮ್ಮ ಸಹಕಾರದಿಂದ ಸಹಾಯಬೇಕಾಗಿದ್ದಲ್ಲಿ, ಬ್ರಿಟನ್ನು ಭಾರತದ ಕೇಳಿಕೆಯನ್ನು ಮನ್ನಿಸದೆ ನಿರ್ವಾಹವಿಲ್ಲವಾಗಿದೆ ಎಂದೂ ಮುಂಬರಿಯುತ್ತ ೫ ದಿನಗಳಲ್ಲಿ ನಾವು ಆತ್ಮಶೋಧನೆಯ ಕಾರ್ಯದಲ್ಲಿ ಬಿದ್ದೆವು. ನನ್ನದೊಂದು ಠರಾವೂ ಇಲ್ಲಿ ಪ್ರಯೋಜನಕಾರಿಯಾಗಲಿಲ್ಲ ಎಂದು ಅಭಿಪ್ರಾಯ ಪಟ್ಟು, ಗಡಿನಾಡಿನ ಗಾಂಧಿಗಳು ವರ್ಕಿಂಗ್ ಕಮಿಟಿಗೆ ರಾಜಿನಾಮೆ ಕೊಟ್ಟ ವಿಚಾರವನ್ನು ವಿವೇಚಿಸುತ್ತಾ, "ತನ್ನ ಹಾಗೂ ತನ್ನ ನಲ್ಮೆಯ ಕುದ್ಯಾ ಕಿದ್‌ಮತ್‌ಗಾರರ ನಂಬುಗೆಯ ವಿಚಾರವಾಗಿ ಗಾಫರ್‌ಖಾನರು ಸ್ಪಷ್ಟಗೊಳಿಸಿದರು. ವಾರ್ಧಾದಲ್ಲಾದ ಠರಾವಿನ ನಂತರದಲ್ಲೇ ಅವರು ತನಗೆ ಕಾಂಗ್ರೆಸಿನಲ್ಲಿ ಎಡೆ ಇಲ್ಲವೆಂದು ಮನಗಂಡರು. ಅವರದೊಂದು ಅವರ ಶಿಷ್ಯರಿಗಾಗಿ ಹೊಸ ಕಾರ್ಯವಿದೆ. ಅದರಿಂದಲೇ ವರ್ಕಿಂಗ್ ಕಮಿಟಿಯೂ ಕೂಡ, ಕಾಂಗ್ರೆಸಿನಿಂದ ದೂರವಿದ್ದ ಅವರು, ನನ್ನಂತೆ ಕಾಂಗ್ರೆಸಿಗೆ ಹೆಚ್ಚಿನ ಸೇವೆ ಸಲ್ಲಿಸಬಹುದೆಂದು ತಿಳಿದು ಸಂತೋಷದಿಂದ ನಿವೃತ್ತರಾಗಲು ಅನುಮತಿಯಿತ್ತಿತು. ಅಂದ ಮೇಲೆ ನಂಬಿಕೆ ಆಳಿಯುತ್ತಿದೆ ಎಂದು ಕಂಡು ಬಂದ ಆ ನಂಬುಗೆಯನ್ನು ನಾವು ನಮ್ಮ ಸಹೋದರರಿಗೀಯದಿರಲಾರೆವೆಂಬುದನ್ನು ಹೇಗೆ ಅಲ್ಲವೆನ್ನಬಹುದು?"

"ರಾಜಾಜಿಯವರೇ ಠರಾವನ್ನು ತಯಾರಿಸಿ, ತನ್ನ ಜಾಣ್ಮೆಯಿಂದ ಇತರರನ್ನು ತನ್ನೆಡೆಗೆ ಸೆಳೆದುಕೊಂಡರು. ಸರ್ದಾರ್ ಪಟೇಲರೂ ಇವರಿಗೆ ನೆರವಾದರು. ನನಗೆ ಈ ಠರಾವು ಪಾಸಾಗದಂತೆ ಮಾಡುವ ಶಕ್ತಿ ಇದ್ದರೂ, ನಾನು ಇಚ್ಛಿಸಿದಷ್ಟೇ ಧೈರ್ಯವನ್ನು ಇವರಿಗೂ ಕೊಟ್ಟೆ. ನಾನೂ ರಾಜಾಜಿಯೂ ಅಹಿಂಸೆಯ ವಿಚಾರದಲ್ಲಿ ದೂರ ದೂರ ಸರಿಯುತ್ತಿದ್ದೆವೆಂದು ತಿಳಿದರೂ ರಾಜಾಜಿಯವರು ಇದಕ್ಕೆ ಒಪ್ಪುವಂತಿಲ್ಲ. ನನ್ನ ದೃಷ್ಟಿ [illegible]ಾಗಿದೆ ಎಂದವರ ಎಣಿಕೆ. ನಾನದಕ್ಕೆ ಹಾಸ್ಯದ ಉತ್ತರವಿತ್ತೆನಾದರೂ ವಿರೋಧಿಸಲಾರದಾದೆ." ಅವರ ನಂಬುಗೆ ತನ್ನ ನಂಬುಗೆಯಂತಲ್ಲವೆಂದು ತಾನು ಹೇಳಲಾರೆನೆಂದೂ, ಅದರಿಂದಲೇ ವಾರ್ಧದಲ್ಲಿ ನಾಯಕತ್ವದಿಂದ ದೂರವಾದೆನೆಂದೂ ಹೇಳಿ ರಾಜಾಜಿಯವರ ಠರಾವು ೫ ಮಂದಿ ಸದಸ್ಯರು ತಾಟಸ್ಥ್ಯ ವಹಿಸಲು, ಹೇಗೆ ಮುಂಜೂರಾಯಿಂದು ತಿಳಿಸಿ, ಸರ್ವಾನುಮತದಿಂದ ಇದು ಪಾಸಾಗದಿದ್ದರೂ, ಇಂತಹ ಸಂದರ್ಭದಲ್ಲಿ ಸರ್ವಾನುಮತದಿಂದ ಅಗತ್ಯವಿಲ್ಲೆಂದೂ ತಾನು ಆ ಠರಾವು ನ್ಯಾಯಬದ್ಧವೆಂದೂ ರಾಜಾಜಿಗಳಿಗೆ ತಿಳಿಸಿರುವುದಾಗಿಯೂ ವಿವೇಚಿಸಿದರು.

"ಒಳ್ಳೆಯದಕ್ಕಾಗಿರಲಿ, ಕೆಟ್ಟದಕ್ಕಾಗಿರಲಿ, ಕಮಿಟಿಯು ಭೀಕರ ಯೋಜನೆಯನ್ನು ಕೈಕೊಂಡಿದೆ. ಸತ್ಯಶಾಲಿಗಳ ಸತ್ಯಾಗ್ರಹದ ಮೇಲೆ ನಂಬುಕೆ ಇರುವವರು ಇದರಿಂದ ದೂರವಾಗಬಹುದು. ಆದರೆ ಪ್ರಕೃತ ಅವರೇನು ಮಾಡಬಲ್ಲರೆಂಬುದೂ ಹೇಳಲಾರದಾಗಿದೆ. ರಾಜಾಜಿಯವರ ಠರಾವು ಕಾಂಗ್ರೆಸಿನ ನಿರ್ದಿಷ್ಟಧ್ಯೇಯವನ್ನು ಸಾರುತ್ತಿದೆ. ಧರ್ಮದ ಕಟ್ಟಿಗೆ ಕಾಂಗ್ರೆಸ್ ಬಿದ್ದಿದೆ ಎನ್ನುವವರು ಈ ಠರಾವನ್ನು ಸ್ವಾಗತಿಸಿ, ಅದನ್ನು ಸಹಕರಿಸದಿರಲಾರರು. ಅಂತೆಯೇ ಮುಸ್ಲಿಂ ಲೀಗಿನವರೂ, ಅರಸರುಗಳೂ ತಿಳಿಯಲಿ. ಬ್ರಿಟಷ್ ಸರಕಾರವು ತಾನಾವುದನ್ನು ಮಾಡಬೇಕೋ ಅದನ್ನು ಆರಿಸಬೇಕು. ಇಲ್ಲವಾದರೆ ನನ್ನ ದೃಷ್ಟಿಯ ವಿಚಾರವಾಗಿ ರಾಜಾಜಿಯವರು ಪಟ್ಟ ಸ್ಥಂಶಯವೇ, ನಮಗೆ ಬ್ರಿಟಿಷರ ದೃಷ್ಟಿಯ ವಿಚಾರದಲ್ಲಿ ಬರದಿರದು.

ತಮ್ಮ ಅಧಿಕಾರದಿಂದಾಗಿ ಭಾರತದಿಂದ ಸಹಾಯವನ್ನವರು ಪಡೆಯಬೇಕೇ ಅಥವಾ ಸ್ವತಂತ್ರ ಭಾರತ ಕೊಡುವ ಸಹಕಾರದ ಮೇಲೆ ಅವರಿಗೆ ಭರವಸೆ ಇವೆಯೋ ಎಂಬುದು ಪ್ರಶ್ನೆ. ನನ್ನ ವೈಯಕ್ತಿಕ ಬುದ್ಧಿನಾದ ಅಪ್ರಯೋಜಕವಾಗಿದೆ. ನನ್ನ ಸಹಾಯದ ಅರ್ಪಣೆ ಸದಾ ಇದ್ದೇ ಇದೆ. ನನ್ನ ಬುದ್ಧಿವಾದದ ನಿರಾಕರಣೆ ಅವರ ಶಕ್ತಿಯನ್ನು ಕುಂದಿಸದಿರದು. ಬುದ್ಧಿವಾದವನ್ನು ಒಪ್ಪಲಾರರಾದಲ್ಲಿ, ನಾನು ಬ್ರಿಟಷ್ ಸರಕಾರದ ಮಿತ್ರನಾಗಿ ಕಾಂಗ್ರೆಸಿನಿಂದ ಅರ್ಪಿತವಾದ ವೈತ್ರಿಯನ್ನು ಬಿಡದಿರಿ ಎಂದು ಎಚ್ಚರಿಸುತ್ತೇನೆ."

ಸ್ಮಾರಕವನ್ನು ತೆಗೆಯಿರಿ!

ಕಲ್ಕತ್ತೆಯ ಹಾಲ್ವೆಲ್ ಸ್ಮಾರಕವನ್ನು ಅಲ್ಲಿಂದ ವಿಸರ್ಜನೆಗೊಳಿಸುವ ಈ ತೀರ್ಮಾನ ಮಾಡಲಿಕ್ಕೆ ಬಂಗಾಳದ ಪ್ರಧಾನರಾದ ಮಿ. ಫಜಲುಲ್ ಹಕ್ಕ್‌ರಿಗೆ ಏಕಿಷ್ಟು ಹೊತ್ತು ಬೇಕೋ ಅದು ಅವರಿಗೇ ತಿಳಿದುದು. ಈ ಸ್ಮಾರಕವು, ನಮ್ಮ ವಂತೀಯರು ಅಗತ್ಯವಾಗಿಯೂ ತಿಳಿಯಲೇ ಬೇಕಾದ ಅಂತಹ ಮಹತ್ವದ ಇತಿಹಾಸಿಕ ಘಟನೆಯನ್ನೇನೂ ಸೂಚಿಸುವುದಿಲ್ಲ. ಇದು ಸೂಚಿಸುತ್ತದೆಂದು ಭಾವಿಸಲಾಗಿರುವ 'ಬ್ಲಾಕ್ ಹೊಲ್' ದುರಂತವೂ ನಡೆದುದೆನ್ನಲು ಸರಿಯಾದ ಯಾವ ದಾಖಲೆಯೂ ಇಲ್ಲ. ಮತ್ತೆ ಕಲ್ಕತ್ತೆಯ ಜನಭರಿತವಾದ ಒಂದು ಕ್ಷೇತ್ರದಲ್ಲಿಯೇ ಈ ಸ್ಮಾರಕವನ್ನು ನಿರ್ಮಿಸಬೇಕಾದ ಅಗತ್ಯವೂ ತೋರಲಿಲ್ಲ! ಕಾರಣ, ಅಂತಹ ಯೋಗ್ಯ ಕಾರ್ಯವನ್ನೇನೂ ಹಾಲ್ವೆಲ್ ಮಾಡಿದನೆನ್ನುವ ಹಾಗಿಲ್ಲ.

ಈ ವಿಷಯದಲ್ಲಿ ಯುರೋಪೀಯ ಸಮಾಜದ ಮುಂದಾಳುಗಳೂ, ಈ ಸ್ಮಾರಕವನ್ನು ಅಲ್ಲಿಂದ ತೆಗೆಯಬೇಕೆಂದು ಹಿಂದೀಯರ ಅಭಿಪ್ರಾಯಕ್ಕೆ ಬೆಂಬಲ ಕೊಟ್ಟಿರುವುದು ಗುರುತಿಸಿಕೊಳ್ಳತಕ್ಕ ಸಂಗತಿಯಾಗಿದೆ. ಹೀಗಿರುವಲ್ಲಿ ಬಂಗಾಳದ ಪ್ರಧಾನರು ಈ ವಿಷಯದ ಇತ್ಯರ್ಥಕ್ಕಾಗಿ ಏಕೆ ವಿಳಂಬಿಸುವರೋ ತಿಳಿಯದು. ಕಳೆದ ವಾರ ಕಲ್ಕತ್ತೆಯಲ್ಲಿ ಸತ್ಯಾಗ್ರಹ ಚಳವಳ ಆರಂಭವಾಗಿದೆ. ಮಿ. ಹಕ್ಕರು ಯಾವುದಾದರೂ ತೀರ್ಮಾನ ಕೊಡುವ ಮೊದಲು, ಆಸಕ್ತಿಯುಳ್ಳ ಎಲ್ಲಾ ಸಮಾಜಗಳ ಸಹಕಾರಕ್ಕಾಗಿ ತಾವು ಕಾಯುತ್ತಿರುವೆವೆಂದು ನುಡಿದರು. ಹಿಂದೂಗಳೂ, ಮುಸ್ಲಿಮರೂ ಅಲ್ಲದೆ ಯುರೋಪೀಯರ ಅಭಿಪ್ರಾಯವೂ ಏನೆಂದೂ ಸ್ಪಷ್ಟವೇ ಇದೆ. ಮಿ. ಗ್ರಿಫಿತ್‌ರವರು, ಸೆಂಟ್ರಲ್ ಎಸೆಂಬ್ಲಿಯಲ್ಲಿ ಬಂಗಾಳ ಯುರೋಪೀಯರ ಪ್ರಾತಿನಿಧ್ಯ ವಹಿಸಿರುವವರು, ಐಕತೆಗೆ ಭಂಗತರುವ ಈ ಸ್ಮಾರಕವನ್ನು ಅಲ್ಲಿಂದ ತೆಗೆಯಿರಿ ಎಂದಿದ್ದಾರೆ. ಹಿಂದೀಯರ ಮತ್ತು ಯುರೋಪೀಯರ ಒಳ್ಳೆಯ ಸಂಬಂಧಕ್ಕೆ ಭಂಗತರುವ ಯಾವುದನ್ನೂ ನಾನೊಪ್ಪಲಾರೆ ಎಂದಿದ್ದಾರೆ. ಇದನ್ನು ತನ್ನ ಸಹಾಯಕ್ಕಿರುವ ಹೇಳಿಕೆಯೆಂದು ಹಕ್ಕರು ಸ್ವಾಗತಿಸುವ ಬದಲು ಇದರಲ್ಲಿ "ಬಿಡುಕಾದ ಸಮಸ್ಯೆ"ಗಳಿವೆ ಎನ್ನುತ್ತಾರೆ. ಪ್ರಾಯಶಃ ಈಗ ಇದರ ತೀರ್ಮಾನಕ್ಕೆ ಹೊರಟರೆ, ಬಲಾತ್ಕಾರದ ಬೆದರಿಕೆಗೆ ಕಟ್ಟುಬಿದ್ದ ಈ ದೌರ್ಬಲ್ಯಕ್ಕೆ ತಾವು ಒಳಗಾದೇವೆಂಬ ಅಪಯಶಸ್ಸಿಗೆ ತಾವು ಗುರಿಯಾದೇವೆಂದು ಮಿ. ಹಕ್ಕರು ಭಾವಿಸಲೂ ಬಹುದೇನೋ! ಒಂದು ವೇಳೆ, ಈ ಸ್ಮಾರಕವನ್ನು ಅಲ್ಲಿಂದ ತೆಗೆಸುವ ಮೊದಲು "ಸತ್ಯಾಗ್ರಹವನ್ನು ನಿಲ್ಲಿಸಿ" ಎಂದು ಭೋಸರನ್ನು ಕಂಡು ಮಾತಾಡುವುದೇ ಭೋಸರ ಈ ಸಂದರ್ಶನದ ಉದ್ದೇಶವೇನೋ! ಹಾಗಿದ್ದರೆ, ಭೋಸರು ಹಟವಾದಿಗಳಾಗಿ, ಮಿ. ಹಕ್ಕರ ಉದ್ದೇಶಕ್ಕೆ ಭಂಗ ತರುವ ಯಾವ ಕಾರ್ಯವನ್ನು ಮಾಡರೆಂಬುದು ನಿರ್ವಿವಾದ. ವಸ್ತುತಃ ಪ್ರತಿಯೊಬ್ಬರೂ ಈ ಸ್ಮಾರಕವನ್ನು ತೆಗೆಯುವಲ್ಲಿ ಏಕಾಭಿಪ್ರಾಯ ಉಳ್ಳವರಾಗಿರುವಾಗ ಇನ್ನೂ ಇದನ್ನುದ್ದ ಎಳೆಯುವಲ್ಲಿ ಅರ್ಥವಿಲ್ಲ.

ಗಡಿನಾಡಿನಲ್ಲಿ

ಇಲ್ಲಿ ಒಬ್ಬ ಯುರೋಪೀಯ ಸೋಲ್ಜರನನ್ನು ಕಾಡು ಜನರು ಗುಂಡು ಹಾರಿಸಿ ಕೊಂದಿದ್ದಾರೆ. ಅಲ್ಲದೆ ಒಬ್ಬ ಅಸಿಸ್ಟೆಂಟ್ ಸಬ್-ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಇವ್ವರಿಗೂ, ಮತ್ತೊಬ್ಬ ಕಾನ್ಸ್‌ಟೇಬಲ್‌ನಿಗೂ ಗುಂಡು ಹಾರಿಸಿ ಅವರೂ ಮೃತರಾಗಿದ್ದಾರೆ.

ಹಿಂದೂದೇಶ

ಭಾರತ ಸ್ವಾತಂತ್ರ್ಯ
ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಠರಾವು

"ಭಾರತ ರಾಜಕೀಯ ರಂಗದಲ್ಲಿನ ಅಸಹಕಾರ ಪರಿಸ್ಥಿತಿಯ ನಿವಾರಣೆಗಾಗಿ ಹೊಸ ಯೋಜನೆ ನಡೆಸಬೇಕಾಗಿ ಬಂದ ಸಂದರ್ಭವನ್ನು ಕಾಂಗ್ರೆಸ್ ಯೋಚಿಸಿದೆ; ಮತ್ತು ಕಾಂಗ್ರೆಸಿನ ಧ್ಯೇಯವನ್ನು ವ್ಯಕ್ತಪಡಿಸುವದಕ್ಕಾಗಿ ಅಂತರ್ರಾಷ್ಟ್ರೀಯ ಪರಿಸ್ಥಿತಿಗಳನ್ನೂ ಕೂಲಂಕಶವಾಗಿ ಕಮಿಟಿಯು ವಿವೇಚಿಸಿದೆ.

ಹಿಂದಿಗಿಂತ ಹೆಚ್ಚಾಗಿ, ಬ್ರಿಟನ್ ಮತ್ತು ಭಾರತಗಳ ಸಮಸ್ಯೆಗಳ ನಿವಾರಣೆಗಾಗಿ ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ಗ್ರೇಟ್ ಬ್ರಿಟನ್ ಒಪ್ಪಿಕೊಳ್ಳಬೇಕಾಗಿದೆಯೆಂದೂ; ಆದ್ದರಿಂದ ಅಂತಹ ಪ್ರಕಟನೆಯನ್ನು ಕೂಡಲೇ ಕೊಟ್ಟು, ಅದರ ಪೂರ್ತಿಯ ಆರಂಭವೆಂಬಂತೆ, ಕೇಂದ್ರ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದೂ, ಇಂತಹ ಸರಕಾರ ಪ್ರಕೃತಕ್ಕಾಗಿ ಸ್ಥಾಪಿಸಲ್ಪಟ್ಟುದಾದರೂ, ಸೆಂಟ್ರಲ್ ಲೆಜಿಸ್ಲೇಚರಿನ ಸದಸ್ಯರ ಆದರ ಗೌರವಗಳಿಗೆ ಪಾತ್ರವಾಗಿದ್ದು ಪ್ರಾಂತಿಕ ಸರಕಾರಗಳ ಸಕಲ ಸೌಹಾರ್ದ, ಸಹಕಾರಗಳನ್ನು ಹೊಂದಿರಬೇಕೆಂದೂ ಅಭಿಪ್ರಾಯ ಪಡುತ್ತದೆ.

ಮೇಲಿನ ಪ್ರಕಟನೆಯನ್ನು ಮಾಡದೆ, ಅದಕ್ಕಾಗಿ ಕೂಡಲೇ ರಾಷ್ಟ್ರೀಯ ಸರಕಾರ ಸ್ಥಾಪಿಸಲ್ಪಡದಿದ್ದರೆ, ರಕ್ಷಣೆಗಾಗಿ ಕೂಡಿ ಹಾಕಲ್ಪಡುತ್ತಿರುವ ರಾಷ್ಟ್ರದ ಧನ ಹಾಗೂ ಜನ ಶಕ್ತಿಗಳು ಯಾವುದೇ ವಿಧದಿಂದಲೂ, ನೀತಿಯಿಂದಲೂ ಜನತೆ ರಾಷ್ಟ್ರಗಳ ಸ್ವಯಂ ಇಚ್ಛೆಯಿಂದ ದೊರೆತುದಾಗಿರದು. ಮಾತ್ರವಲ್ಲ; ಬಲಾತ್ಕಾರದಿಂದ ಕೂಡಿಸಿದ್ದಾಗಿದೆ ಎಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತಿಳಿದುಕೊಳ್ಳುತ್ತದೆ. ವರ್ಕಿಂಗ್ ಕಮಿಟಿಯು ಹೇಳುವಂತೆ ಬ್ರಿಟಿಷ್ ಸರಕಾರ ನಡಕೊಂಡರೆ, ಅದು ತನ್ನ ಸಂಪೂರ್ಣ ಬೆಂಬಲವನ್ನು ರಕ್ಷಣಾ ವಿಚಾರಕ್ಕೆ ಕೊಡಬಹುದು" ಎಂಬ ಠರಾವನ್ನು ಮಂಜೂರು ಮಾಡಿದೆ.

ಗಡಿನಾಡಿನ ಗಾಂಧಿಗಳು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ, ಅದರ ಸದಸ್ಯರಾಗಿದ್ದ ಗಡಿನಾಡಿನ ಗಾಂಧಿ—ಖಾನ್ ಅಬ್ದುಲ್ ಗಾಫರ್‌ಖಾನರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದಾರೆ. ವರ್ಕಿಂಗ್ ಕಮಿಟಿಯು ಅಹಿಂಸೆಯ ವಿಚಾರದಲ್ಲಿ ಒಂದು ನಿರ್ದಿಷ್ಟ ಕೊನೆಗೆ ಬಂದುದೂ, ಅಹಿಂಸೆಯನ್ನು ಳಿದು ಪಠಾಣರು ಇಂದು ತಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಲ್ಲಿ ಸಾಗಿಸರೆಂಬುದೂ ಈ ರಾಜಿನಾಮೆಗೆ ಕಾರಣವಂತೆ.

ವಜೀರಿಸ್ಥಾನಕ್ಕೆ

ವಜೀರಿಸ್ಥಾನದಲ್ಲಿ ಇಂದು ಬ್ರಿಟಿಷ್ ಸೈನಿಕರೊಳಗೂ, ಅಲ್ಲಿನ ಪಠಾಣ ಪುಂಡರೊಳಗೂ ಸಾಗುತ್ತಿರುವ ಕಾಳಗದ ಕುರಿತಾಗಿಯೂ, ಅಲ್ಲಿನ ದಂಗೆಗಾರರು ಸಿಕ್ಕಸಿಕ್ಕವರನ್ನು ಅಪಹರಿಸಿ, ಗಡಿಯಲ್ಲಿರುವವರಿಗೆ ತೊಡಕನ್ನೀವುದರ ವಿಚಾರವಾಗಿಯೂ ವಿವೇಚಿಸಿ, ಈ ವಿಷಯಗಳಿಗೆ ಆ ಜನರ ಆರ್ಥಿಕ ದುಃಸ್ಥಿತಿಯೇ ಕಾರಣವಿರಬಹುದೆಂದೂ ತಿಳಿದು, ಶ್ರೀ. ಭುಲಾಭಾಯಿ ದೇಸಾಯಿ ಮತ್ತು ಜನಾಬ್ ಆಸಫ್ ಅಲಿಯವರನ್ನು ವಜೀರಿಸ್ಥಾನಕ್ಕೆ ಕಳುಹಿಸಲು ವರ್ಕಿಂಗ್ ಕಮಿಟಿ ನಿಶ್ಚಯಿಸಿದೆ.

ಧಾರ್ಮಿಕ ಸಮಸ್ಯೆ

ಶ್ರೀ. ಸಿ. ರಾಜಗೋಪಾಲಾಚಾರಿ, ಶ್ರೀಮತಿ ಸರೋಜಿನಿ ನಾಯುಡು, ಡಾ. ಸಯದ್ ಮಹಮ್ಮದ್‌ರವರು ಸರ್ ಸಿಕಂದರ್ ಹಯಾತ್‌ಖಾನರನ್ನೂ ಮಿ. ಎ. ಕೆ. ಫಜ್ಲುಲ್ ಹಕ್‌ರವರನ್ನೂ ಕಂಡು ಧಾರ್ಮಿಕ ಸಮಸ್ಯೆಯ ಕುರಿತಾಗಿ ದಿಲ್ಲಿಯಲ್ಲಿ ಚರ್ಚಿಸಿದರೆಂದು ತಿಳಿದು ಬಂದಿದೆ.

ರಾಜಕೀಯ ಕೈದಿಗಳು

ಅಖಿಲ ಭಾರತ ರಾಜಕೀಯ ಕೈದಿಗಳ ದಿನಾಚರಣೆಯು ತಾ. ೭ರಲ್ಲು ಕಲ್ಕತ್ತೆಯಲ್ಲಿ ಸರ್ದಾರ್ ಸಾರ್ದೂಲ ಸಿಂಘ್ ಕವೀಶ್ವರ ಅಧ್ಯಕ್ಷತೆಯಲ್ಲಿ ಜರುಗಿತು. ವೈಯಕ್ತಿಕ ಸ್ವಾತಂತ್ರ್ಯವನ್ನು ಸರಕಾರವು ಮನ್ನಿಸಿ [illegible] ವಿಷಾದಿಸಿ

ಇಂದಿನ ವಾರ್ತೆ

ಫ್ರೆಂಚ್ ನೌಕೆಯ ಧ್ವಂಸ

ಎಡ್ಮಿರಾಲಿಟಿಯ ಪ್ರಥಮ ಪ್ರಭುಗಳಾದ ಮಿ. ಅಲೆಕ್ಸಾಂಡರರವರು ಕಾಮನ್ಸ್ ಮಂದಿರದಲ್ಲಿ ಒಂದು ಭಾಷಣ ಕೊಡುತ್ತ, ಫ್ರೆಂಚ್ ನೌಕೆಯ ಧ್ವಂಸಕಾರ್ಯವು ಹೇಗೆ ಸಾಗಿತೆಂದು ವಿಸ್ತರಿಸಿದರು. ಬ್ರಿಟಿಷ್ ಅಧಿಕಾರಿಗಳ ಸಾಹಸವನ್ನು ಕೊಂಡಾಡಿದರು.

ಮೆಡಿಟರೇನಿಯನಿನಲ್ಲಿ

ಮೆಡಿಟರೇನಿಯನಿನಲ್ಲಿ ಈಚೆಗೆ ನಡೆದ ಕಾಳಗದಲ್ಲಿ ಇಟೆಲಿಯ ಒಂದು ಯುದ್ಧ ಹಡಗನ್ನು ಬ್ರಿಟಿಷ್ ಬಲಗಳು ಗಾಸಿಪಡಿಸಿದೆ.

ಅಯರ್‌ಲ್ಯಾಂಡಿನಲ್ಲಿ

ಇಲ್ಲಿ ದೇಶರಕ್ಷಣೆಗಾಗಿ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿದೆ. ಮುಂದಿನ ರಣಾಂಗಣವು ಇದೇ ಎಂದು ಅಯರ್‌ಲ್ಯಾಂಡಿನ ಪ್ರಮುಖಾಧಿಕಾರಿಗಳ ನಂಬಿಕೆ.

ಸರ್ ತೇಜ್ ಬಹದ್ದೂರ್ ತಪ್ಪು

ಶ್ರೀನಗರದ ಶ್ರೀ ಪ್ರತಾಪ ಕಾಲೇಜಿನ ಕಾನ್ವೊಕೇಶನ್‌ನ ಕಾಲದಲ್ಲಿ, ಸರ್. ಟಿ. ಬಿ. ಸಪ್ರೂರವರು ಭಾಷಣಮಾಡುತ್ತ "ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಲು ಬಹಳ ವಿಳಂಬನಮಾಡಿದರು" ಎಂದು ಬ್ರಿಟಿಷ್ ಸರಕಾರಕ್ಕೆ ಉಡುಗೊರೆ ಕೊಟ್ಟಿರುವರು.

ಬ್ರಿಟನಿನ ಯುದ್ಧದ ಖರ್ಚು

ಬ್ರಿಟನಿಗೆ ಈಗ ದಿನವೊಂದಕ್ಕೆ ಈ ಯುದ್ಧಕ್ಕಾಗಿ ೭ ಮಿಲ್ಯ ಸ್ಟರ್ಲಿಂಗ್ ಖರ್ಚಾಗುತ್ತದೆಂದು ತಿಳಿದುಬರುತ್ತಿದೆ.

ನಡೆಸಬೇಕೆಂದೂ, ಅಧ್ಯಕ್ಷರು ಅಭಿಪ್ರಾಯ ಪಟ್ಟರು.

ವಿದ್ಯಾರ್ಥಿಯ ಸೆರೆ

ದರ್ಭಾಂಗ ಜಿಲ್ಲಾ ಸ್ಟೂಡೆಂಟ್ಸ್ ಫೆಡರೇಶನಿನ ಜನರಲ್ ಸೆಕ್ರೆಟರಿ ನಾರಾಯಣ ಚಂದ್ರ ವರ್ಮನ ಮನೆಯನ್ನು ಝಡ್ತಿ ನಡೆಸಿ ಆತನನ್ನು ಸೆರೆ ಹಿಡಿದಿದ್ದಾರೆ.

ಸಿಲಟ್

ಇಲ್ಲಿನ ಫೋರ್ವರ್ಡ್ ಬ್ಲಾಕ್ ಕೆಲಸಗಾರರಾದ ವಿಭೂತಿ ಚಕ್ರವರ್ತಿಗಳನ್ನು ರಕ್ಷಣ ಕಾನೂನಿನ ಪ್ರಕಾರ ಸೆರೆ ಹಿಡಿಯಲಾಗಿದೆ.

ಕಲ್ಕತ್ತ

ಇಲ್ಲಿನ "ದೇಶ" ಮತ್ತು "ದುನಿಯಾ" ಎಂಬ ಎರಡು ಬಂಗಾಳಿ ವಾರಪತ್ರಿಕೆಗಳ ಸಂಪಾದಕರು, ಮುದ್ರಕರು ಮತ್ತು ಪ್ರಕಾಶಕರುಗಳನ್ನು ಸಂಪಾದಕೀಯ ವಿಚಾರದಲ್ಲಿ ಸರಕಾರಕ್ಕೆ ಆಗದ ವಿಚಾರ ಬರೆದರೆಂಬ ಆರೋಪಕ್ಕೆ ಗುರಿಮಾಡಿ, ವಿಚಾರಣೆ ನಡೆಸಿ ಕೊನೆಗೆ ಬುದ್ಧಿವಾದ ಹೇಳಿ ಬಿಟ್ಟಿದ್ದಾರೆ.

ಭೀಕರ ನೆರೆ

ಒರಿಸ್ಸದ ಬಲಸೋರೆ ಜಿಲ್ಲೆಯಲ್ಲಿ ಭೀಕರ ನೆರೆ ತುಂಬಿ ಸುಮಾರು ೨೦ ಸಾವಿರ ಮನೆಗಳು ನಾಶವಾಗಿವೆ ಒಂದು ಲಕ್ಷಕ್ಕೂ ಮಿಕ್ಕಿ ಜನರು ನಿರಾಶ್ರಿತರಾಗಿದ್ದಾರೆ.

ರಾಜಕೋಟೆ ದಿವಾನರು

ರಾಜಕೋಟೆಯ ದಿವಾನರಾಗಿದ್ದ ಶ್ರೀ. ಯನ್. ಯನ್. ಆಂಕ್ಲೇಸರಿಯವರಿಗೆ [illegible]ಜೀ ನಾಮೆ ಕೊಟ್ಟಿದ್ದಾರೆ. ರಾಜ್ಯಾಡಳಿತೆಯಲ್ಲಿ ಹೆಚ್ಚಿನ ಬದಲಾವಣೆಯ ಸಂಭವನವಿದೆ.

ಹೊಲ್‌ವೆಲ್ ಸತ್ಯಾಗ್ರಹ

ಕಲ್ಕತ್ತೆಯ ಕತ್ತಲೆ ಕೋಣೆಯ ಸ್ಮಾರಕವಾದ ಹೊಲ್‌ವೆಲ್ ಸತ್ಯಾಗ್ರಹ ಸಂಬಂಧ ಇದುವರೆಗೆ ಸೆರೆಯಾದ ಸತ್ಯಾಗ್ರಹಿಗಳಾದ ಸಂಖ್ಯೆ ೭೧. ಇವರಲ್ಲಿ ಒಬ್ಬ ಮುಸ್ಲಿನು, ೫ ಮಂದಿ ಸಿಕ್ಕರು. ಉಳಿದವರು ಹಿಂದುಗಳು.

ಕಳ್ಳರ ಪರಾರಿ

ಕರಾಚಿಯ ನವಾಬ್ ಶಹಾ ಸಬ್ ಜೈಲಿನಲ್ಲಿ ೧೪ ಕೈದಿಗಳು ಅಡಿಗೆ ಮನೆಯಿಂದ ಅವರವರ ಕೋಣೆಗಳಿಗೆ ಸಾಗಿಸಲ್ಪಡುತ್ತಿದ್ದಾಗ ತಪ್ಪಿಸಿಕೊಂಡರು. ಇವರಲ್ಲಿ ನಾಲ್ಕು ಮಂದಿ ಹಿಡಿಯಲ್ಪಟ್ಟರು. ತಪ್ಪಿಸಿಕೊಂಡ ಹತ್ತು ಮಂದಿಯ ಬೆನ್ನು ಹತ್ತಿ ೬ ಮಂದಿಯನ್ನು ಹಿಡಿಯಲಾಗಿದೆ, ಮೂವರು ಕೊಲ್ಲಲ್ಪಟ್ಟಿದ್ದಾರೆ. ಉಳಿದ



ಅವುಗಳ
ಹಲ್ಲಿನ ಮೇಲೆ
ಅವು ಆಧರಿಸಿಕೊಂಡಿವೆ

DUNLOP
ಡನ್‌ಲಪ್ ಮಾತ್ರ
ಹಲ್ಲುಗಳು ಇರುವ ಟಾಯರುಗಳು



ರಸ್ತೆ ಅದುಮಿ ಹಿಡಿಯಲು 2000 ಹಲ್ಲುಗಳು



ಭಾರತದ ವಿದ್ಯಮಾನಗಳಿಗಾಗಿ ಭಾರತದಲ್ಲಿ ಮಾಡಲ್ಪಟ್ಟುದು

DK187

೭೦ ಮಂದಿಯ ಸೆರೆ

ಲಕ್ನೌವಿನಲ್ಲಿ ನಡೆದ ರಥಜಾತ್ರೆ ಮೆರವಣಿಗೆಯ ಕಾಲ ಮುಸ್ಲಿಮರ ಗೊಂದಲ ಹಬ್ಬಿದ ಪರಿಣಾಮವಾಗಿ ಹಲವು ಮಂದಿಗೆ ಗಾಯಗಳಾಗಿವೆ. ಮೆರವಣಿಗೆ ಏರ್ಪಡಿಸಿದ ಹಾಗೂ ಇತರರ ಸೆರೆ ನಡೆದಿದೆ. ೭೦ ಮಂದಿ ಸೆರೆಯಾಗಿದ್ದಾರೆ. ಪೋಲೀಸರ ಕಾವಲು ಸಾಗುತ್ತಿದೆ.

ಮುಂದಿನ ಕಾಂಗ್ರೆಸ್

ಮುಂದಿನ ಕಾಂಗ್ರೆಸ್ ಅಧಿವೇಶನವು ಆರ್ಥಿಕ ಪರಿಸ್ಥಿತಿಯಿಂದಾಗಿ ಗಡಿನಾಡಿನಲ್ಲಿ ನಡೆಯುವುದಿಲ್ಲವೆಂದೂ, ಪಂಜಾಬಿನಲ್ಲಿ ಜರುಗಬಹುದೆಂದೂ ತಿಳಿದುಬಂದಿದೆ.

ಗಂಟೆಗೆ ಒಂದೇ ಸ್ವರ

"ಗಾಂಧೀಜಿಯವರು ಸಿಮ್ಲಕ್ಕೆ ಬಂದುದು ಸಂಧಾನಕ್ಕಲ್ಲ— ಉಪದೇಶಕ್ಕೆ. ಆಗಬಹುದಾದ ರಾಷ್ಟ್ರೀಯ ಸರಕಾರ ಆದರೆ ಅದು ಹಿಂದುಗಳದೇ ಆಗಿಬಿಡುವುದು" ಎಂದು ಮುಂತಾಗಿ ಹೇಳಿ, ಭಾರತ ಇಬ್ಭಾಗವಾಗದೆ ಸಮಸ್ಯೆ ಬಗೆಹರಿಯದೆಂದು ಮಿ. ಜಿನ್ನರು ಪುನಃ ಹೇಳಿದ್ದಾರೆ.

ಜಿನ್ನರು ಅಶುದ್ಧರಾದರೇ?

ಮಹಾತ್ಮರ ಅಶುದ್ಧವಾದದಿಂದ, ಕಾಂಗ್ರೆಸ್ ಶುದ್ಧವಾಗಬೇಕೆಂಬ ಕೂಗು ಬಂದಂತೆ, ಈಗ ಜಿನ್ನರೂ ಕೂಡ — ಮುಸ್ಲಿಂ ಲೀಗ್ ಅಶುದ್ಧವಾಗಿದೆ— ಅದರ ಶುದ್ಧಿ ಆಗಬೇಕು ಎಂದಿದ್ದಾರೆ.

ಹೊಸ ದಿವಾನರು

ರಾಜಕೋಟೆ ಥಾಕೂರ್ ಸಾಹೇಬರ ಸಂಬಂಧಿಕರಾದ ಕುಮಾರ್ ಶ್ರೀ. ವಿಶ್ವನಾಥ ಸಿಂಹ್‌ಜಯವರು ರಾಜಕೋಟೆಯ ದಿವಾನರಾಗಿ ನೇಮಕಹೊಂದಿದ್ದಾರೆ.

ಯುದ್ಧ ಸಹಾಯ

ಅಸ್ಸಾಮಿನಲ್ಲಿ ಇದುವರೆಗೆ ಸಂಗ್ರಹವಾದ ಯುದ್ಧನಿಧಿ ೩ ಲಕ್ಷಕ್ಕೆ ಮಿಕ್ಕಿದೆ. ಮುಂಬಾಯಿ ಗಿರಣಿ ಮ್ಹಾಲಿಕರ ಸಂಘವು ರಕ್ಷಣಾ ಸಾಲಕ್ಕೆ ನಿಬಡ್ಡಿಯಿಂದ ಒಂದು ಲಕ್ಷ ಕೊಟ್ಟಿದೆ.

ಅಂಡ್ರೂಸ್ ನಿಧಿ

ದೀನಬಂಧು ಸಿ. ಯಫ್. ಅಂಡ್ರೂಸರ ಸ್ಮಾರಕ ನಿಧಿಗೆ ರಾಜಕುಮಾರಿ ಅಮೃತ್‌ಕಾಥ್ ಒಂದು ಸಾವಿರ ರೂಪಾಯಿ ದಾನವಿತ್ತಿದ್ದಾರೆ.

ಡಿಫೆನ್ಸ್ ಕಾನೂನು

ಕಲ್ಕತ್ತ ಟ್ರೇಡ್‌ಯೂನಿಯನ್ ಕೆಲಸಗಾರರ ಸಂಘದ ಕಾರ್ಯದರ್ಶಿ ಗೋಪಾಲ್ ಆಚಾರ್ಜಿ, ಬೆಂಗಾಲ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಏಕ್ಟಿಂಗ್ ಜನರಲ್ ಸೆಕ್ರಟರಿ ಕಾಲಿಪಾದ ಬಚ್ಚಿ ಇವರ ಸೆರೆಯಾಗಿದೆ.

ಕೆಲಿಕಟ್

ಉತ್ತರ ಮಲಬಾರು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಕೆ. ವಾಸುದೇವ ಇವರಿಗೆ, ಇವರ ಮನೆ ಜಡ್ತಿನಡೆಸಿದಾಗ "ಸಂಘಟನೆಯ ವೈರಿ" ಎಂಬ. ಪುಸ್ತಕ ದೊರೆಯಿತೆಂದು ಒಂದು ವರ್ಷದ ಕಠಿನ ಸಜೆ ವಿಧಿಸಲಾಗಿದೆ.

೧೧ ಮಂದಿ ಪೋಲೀಸರಿಗೆ ಗಾಯ

ಡಾಕರ ಎಂಬ ಹಳ್ಳಿಗೆ—ಇದ್ದು ಡೇರಾಡನ್ ಪ್ರಾಂತಕ್ಕೆ ಸೇರಿದ್ದು—ಒಂದು ಎಕ್ಸೈಜ್ ಪರಿಶೋಧನೆಯ ಪಾರ್ಟಿ ಹೋಗಿದ್ದಾಗ, ಹಳ್ಳಿಯವರು ಮೇಲೆ ಬಿದ್ದು ಇಬ್ಬರು ಪೋಲೀಸ್ ಆಫೀಸರರು ಸಹಿತ ೧೧ ಮಂದಿಗೆ ಗಾಯಮಾಡಿದ್ದಾರೆ. ಈಗ ೨೨ ಮಂದಿ ಹಳ್ಳಿಯವರನ್ನು ಕೈದು ಮಾಡಲಾಗಿದೆ.

ಮಂಗಳೂರು

ಟ್ರೈನಿಂಗ್ ವಿದ್ಯಾರ್ಥಿಗಳು

ಪುತ್ತೂರು ರೇಂಜಿನಿಂದ ಹಾ. ಎ. ಟ್ರೈನಿಂಗ್‌ಗೆ ಚುನಾಯಿತರಾದ ವಿದ್ಯಾರ್ಥಿಗಳು:— ಶ್ರೀ.ಗಳಾದ ಯಂ. ಮೂಸ ಬ್ಯಾರಿ, ಪೀಟರ್ ಡಮಿಯನ್ ಡಿ'ಸೋಜ, ಜೆರೋಮ್ ಪಿಂಟೋ, ಜೆ. ಕುಞಪ್ಪ, ಡಿ. ಚಿನ್ನಪ್ಪ ಗೌಡ, ಕೆ. ಕಾಂತಪ್ಪ ಆಳ್ವ, ಯನ್ ಚಿಕ್ಕಪ್ಪ ರೈ, ಕೆ. ಶೇಷಪ್ಪ ಗೌಡ, ಯನ್. ವಾಸುದೇವಯ್ಯ, ಯಸ್. ಸುಬ್ರಾಯ ಭಟ್, ಜಿ. ಕೃಷ್ಣ ಭಟ್.

ಉಡುಪಿ ರೇಂಜ್

ಶ್ರೀ.ಗಳಾದ:— ಕೆ. ರಾಮಕೃಷ್ಣ ಉಪಾಧ್ಯ, ಕೆ. ಶ್ರೀನಿವಾಸ ಭಾಗತ, ಯು. ರಾಮಚಂದ್ರ ಮಯ್ಯ, ಕೆ. ರಾಜಗೋಪಾಲ ಹೆಬ್ಬಾರ್, ಐ. ಕೃಷ್ಣ ಕಾರಂತ, ವೈ. ನಾರಾಯಣರಾವ್, ಐರೋಡಿ ನಾರಾಯಣ ಅಲ್ಸೆ, ಕೆ. ಮುದ್ದಣ್ಣ ಶೆಟ್ಟ, ಯು. ಕೆ. ಜಗನ್ನಾಥ ಶೆಟ್ಟ, ಎ. ವೀರಣ್ಣ ಸೂಡ, ಯು. ಮೋನಪ್ಪ ಶೆಟ್ಟ, ಬಿ. ಶೀನ ಶೆಟ್ಟ, ಕೆ. ಶಂಕರಯ್ಯ ಶೆಟ್ಟ, ಬಿ. ರಾಮಣ್ಣ ಶೆಟ್ಟ, ಪಿ. ಗುಂಡು ಶೆಟ್ಟ, ಯಚ್. ಮಹಾಬಲ ಶೆಟ್ಟ, ಕ್ಸೇವಿಯರ್ ಫೆರ್ನಾಂಡಿಸ್, ದೇವದತ್ತ ಸೋನ್ಸ್, ಹಿಲಾರಿ ಮಾರ್ಟಿಸ್, ಪೀಟರ್ ಡಿ'ಸೋಜ, ಕೆ. ರಾಮಚಂದ್ರ ನಾಯಕ್, ಬಿ. ಕರಿಯ ಪೂಜಾರಿ, ಟಿ. ರಾಮ ಬೆಲ್ಚಡ, ಯನ್. ಶ್ರೀನಿವಾಸ ನಾಯಕ, ಯು. ಮುತ್ತಯ್ಯ ಬೆಲ್ಚಡ, ಪಿ. ಮಂಜುನಾಥ ಆಚಾರಿ.

ಕಾರ್ಕಳ ರೇಂಜ್

ಶ್ರೀ.ಗಳಾದ:— ಕೆ. ಯಸ್. ಆಹಮ್ಮದ್ ಪೀರನ್, ಕೆ. ಸೀತಾರಾಮ ಭಟ್, ವಿ. ರಂಗಪ್ಪಯ್ಯ, ಯಸ್. ವೆಂಕಟ್ ರಾವ್, ಯಸ್. ಸದಾಶಿವ ಶೆಟ್ಟ, ಕೆ. ಸಂಜೀವ ಹೆಗ್ಡೆ, ಯನ್. ತಿಮ್ಮಪ್ಪ ಶೆಟ್ಟ, ಕೆ. ವಿ. ಜಗನ್ನಾಥ ಶೆಟ್ಟ, ಬಿ. ದೇಜು ಶೆಟ್ಟಗಾರ, ವೈ. ರಾಮಣ್ಣ ಹೆಗ್ಡೆ, ರೆಮಿಜಿಸ್ ಡಿ'ಸೋಜ, ಜೋನ್ ದೇವಪ್ರಸಾದ ಸೈಮನ್, ಜೋನ್ ದಂತಿಯಾ, ಕೆ. ಯಸ್. ಉಬೇದುಲ್ಲಾ.

ಕುಂದಾಪುರ ರೇಂಜ್

ಶ್ರೀ.ಗಳಾದ ಅರ್ಬನ್ ಡಿ'ಸೋಜ, ಕೆ. ಕೃಷ್ಣದೇವ ಹಂದೆ, ಬಿ. ವಿಟ್ಠಲ್ ಶೆಟ್ಟ, ಯಂ. ಜಿ. ಚಂದ್ರ ಕುರುವನ್ನ್, ಪಿ. ರಾಮ, ಜಿ. ಕೃಷ್ಣ. ಮತ್ತು ಕೆನರಾ ಮಹಮ್ಮಡನ್ ರೇಂಜ್‌ನಿಂದ:— ಅಬ್ದುಲ್ ಲತೀಫ್, ಯನ್. ಎ. ಮಹಮ್ಮದ್ ಫಕೀರ್, ಕೆ. ಅಬ್ದುಲ್ ಖಾದರ್, ಶೇಕ್ ಮೊಹಿದಿನ್, ಬಿ.ಕೆ., ಸಯದ್ ಗೌಸ್ ಸಾಹೇಬ್, ಕೆ. ಮಹಮ್ಮದ್ ಕುಞಿ, ಬಿ. ಶೇಕ್ ಬುಡಾನ್, ಟಿ. ಬಜುಲ್ಲಾ ಸಾಹೇಬ್ ಮತ್ತು ಬಿ. ಅಬ್ಬಬ್ಯಾರಿ.

ನಗರ ಸಭೆ

ನಮ್ಮ ನಗರ ಸಭೆಯು ನಿನ್ನೆ ಸಂಜೆ ೫॥ಗೆ ಸರಿಯಾಗಿ ಚೆಯರ್‌ಮ್ಯಾನರಾದ ಬಿ. ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಚೆಯರ್‌ಮ್ಯಾನರು ಸಭಾರಂಭದ ವೇಳೆ ಹಾಜರಿಲ್ಲದ್ದರಿಂದ ಶ್ರೀ. ಯಂ. ಮಾಧವರಾಯರನ್ನು ಅಧ್ಯಕ್ಷರಾಗಿ ಚುನಾಯಿಸಿ ಕೆಲಹೊತ್ತು ಕಾರ್ಯಕ್ರಮ ಜರುಗಿಸಲಾಯಿತು.

ಜಿ. ಒ.ಗಳು, 'ಎಸ್ಟಿಮೇಟ್'ಗಳು, ಬಿಲ್ಲುಗಳು ಪಾಸಾದುವು. ೧೯೩೯-೪೦ರ ಆಡಳಿತೆ ವರದಿ ಮುಂದುವರಿಸಲಾಯಿತು. ವೈದಾನಿನ ರೇಡಿಯೋವನ್ನು ಸಂಜೆ ೫ರಿಂದ ೭॥ತನಕ ನಡೆಸುವುದೆಂದಾಯಿತು.

ಮಾಸಿಕ ಸಭೆ

ಮಂಗಳೂರು ಪಟ್ಟಣದ ದಕ್ಷಿಣ ಭಾಗಕ್ಕೆ ಸೇರಿದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ದ್ವಿತೀಯ ಸಭೆಯು, ಜಪ್ಪು ಬಿ. ಇ. ಯಮ್. ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಯುತ ಎಮ್. ಎಸ್. ಆಮಣ್ಣ ಇವರ ಅಧ್ಯಕ್ಷತೆಯಲ್ಲಿ ಇದೇ ತಾರೀಕು ೭ನೇ ಶನಿವಾರ ಜಪ್ಪು ಸೈಂಟ್ ಜೋನ್ಸ್ ಹಾ. ಎ. ಶಾಲೆಯಲ್ಲಿ ಜರುಗಿತು. ಸೈಂಟ್ ಜೋನ್ಸ್ ಹಾ. ಎ. ಶಾಲೆಯ ಅಧ್ಯಾಪಕರುಗಳಾದ ಶ್ರೀಯುತ [illegible] ವಾಸುದೇವ ಶಾನಭೋಗ, ಇವರು ಭೂಗೋಳದಲ್ಲಿ ಒಂದು ಮಾದರಿ ಪಾಠವನ್ನೂ, ಶ್ರೀಯುತ ಗೋಪಾಲ ಕೃಷ್ಣ ರಾವು ಬಾಳ ಇವರು ಭೂಗೋಳ ಕಲಿಸುವ ವಿಕೆಯ ವಿಷಯ ಒಂದು ಉಪನ್ಯಾಸವನ್ನೂ ಇತ್ತರು.

ಚುನಾವಣೆಗಳನ್ನು ಮುಂದುವರಿಸಬೇಕು

ನ್ಯಾಯವಿಧಾಯಕ ಸಭೆಯಲ್ಲಿ ನಿರ್ಣಯ

ಲಾ ಕಾಲೇಜ್ ಸ್ಥಾಪನೆ

(ಸ್ವಂತ ಸುದ್ದಿಗಾರರಿಂದ) ಬೆಂಗಳೂರು

ಮೈಸೂರು ನ್ಯಾಯವಿಧಾಯಕ ಸಭೆಯ ಕೊನೆಯ ದಿವಸದ ಕಾರ್ಯಕಲಾಪಗಳು ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಪ್ರಶ್ನೋತ್ತರ ಕಾಲವಾದ ಮೇಲೆ ಸಾರ್ವತ್ರಿಕ ಚುನಾವಣೆಗಳನ್ನು ಈಗ ನಿರ್ಧಾರವಾಗಿರುವಂತೆ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಸದೆ, ಆಂತರ ರಾಷ್ಟ್ರೀಯ ಪರಿಸ್ಥಿತಿಯ ನಿಮಿತ್ತ ಮುಂದುವರಿಸ ಬೇಕೆಂಬ ನಿರ್ಣಯವು ಸೂಚಿಸಲ್ಪಟ್ಟಿತು.

ಶ್ರೀ. ಬೇಲೂರು ಶ್ರೀನಿವಾಸಯ್ಯಂಗಾರ್ಯರು ಭಾಷಣ ಮಾಡಿ ಚುನಾವಣೆಗಳನ್ನು ಮಾರ್ಚಿ ತಿಂಗಳಿನಲ್ಲಿ ನಡೆಸಬೇಕು. ಈಗ ಓಟರುಗಳ ಸಂಖ್ಯೆಯು ೩ ಲಕ್ಷಕ್ಕೆ ಏರಿರುವುದು. ಹಿಂದೆ ೧೩೯,೦೦೦ ಮಾತ್ರ ಇತ್ತು ಎಂದರು.

ಶ್ರೀ. ಹೆಚ್. ಬಿ. ಗುಂಡಪ್ಪ ಗೌಡರು ಭಾಷಣ ಮಾಡಿ ಚುನಾವಣೆಯನ್ನು ಮುಂದುವರಿಸಿದರೆ ಕಾಂಗ್ರೆಸ್ಸಿನವರು ಹೊರಗೆ ಬಂದು ಅವುಗಳಲ್ಲಿ ಭಾಗ ವಹಿಸಲು ಅನುಕೂಲವಾಗುವುದು ಎಂದರು.

ಶ್ರೀ. ಬಿ. ಎಫ್. ಪುಟ್ಟಸ್ವಾಮಿಯವರು ಭಾಷಣ ಮಾಡಿ ಅಂತರರಾಷ್ಟ್ರೀಯ ಪರಿಸ್ಥಿತಿಯು ಕ್ಷಣ ಕ್ಷಣಕ್ಕೂ ಬದಲಾಯಿಸುತ್ತಿರುವುದು. ಮೊದಲು ಸರಕಾರದ ಬಲಕ್ಕೆ ಮತ್ತು ಪ್ರಜಾ ರಕ್ಷಣೆಗೆ ಹೆಚ್ಚು ಗಮನ ಕೊಡಬೇಕು. ಈಗ ಶಕ್ತಿಯ ಯಾವ ಭಾಗವನ್ನೂ ಚುನಾವಣೆಗಳಿಗೆ ವಿನಿಯೋಗಿಸ ಕೂಡದು ಎಂದರು.

ಪ್ರಥಮ ಸಚಿವರ ಉತ್ತರ

ಪ್ರಥಮ ಸಚಿವರು ಉತ್ತರವೀಯುತ್ತ ಸೆಪ್ಟೆಂಬರಿನಲ್ಲಿ ಚುನಾವಣೆಗಳನ್ನು ನಡೆಸಕೂಡದೆಂದು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಬಹುಮತದಿಂದ ತಿಳಿಯಿತು. [illegible] ಸನ್ನಿವೇಶದಲ್ಲಿ ಸಮಸ್ಯಾಪೂರಿತ ರಾಜಕೀಯದಲ್ಲಿ, ಜನತೆಯು ಭಾಗ ವಹಿಸದಿರಬೇಕೆಂದು ಆಶಿಸುವುದರಲ್ಲಿ ಸತ್ವವಿದೆ. ಈ ಸಭೆಯು ವ್ಯಕ್ತ ಪಡಿಸಿರುವ ಅಭಿಪ್ರಾಯಗಳನ್ನು ಸರಕಾರದವರು ಪೊಲಿಟಕಲ್ ಅಸೇರ್ಸ್ ಕಮಿಟಿಯ ಪರಿತೀಲನೆಗೆ ಇಡುವರು ಎಂದು ತಿಳಿಸಿದರು.

ಈ ನಿರ್ಣಯವನ್ನು ಸಭೆಯು ೧೬—೨ ಓಟುಗಳಿಂದ ಅಂಗೀಕರಿಸಿತು.

ಲಾ ಕಾಲೇಜ್ ಸ್ಥಾಪನೆ

ಮೈಸೂರಿನಲ್ಲಿ ಲಾ ಕಾಲೇಜನ್ನು ಸ್ಥಾಪಿಸಲು ತ್ವರಿತವಾಗಿ ಕಾರ್ಯಕ್ರಮವನ್ನು ನಡೆಸಬೇಕೆಂದು, ಶ್ರೀ. ಕೆ. ಆರ್. ಸುಬ್ಬಣ್ಣಾಚಾರ್ಯರು ಸೂಚಿಸಿದರು. ರಾವ್‌ಸಾಹೇಬ್ ಸಿ. ಹಯವದನರಾಯರು ಸಮರ್ಥಿಸಿದರು.

ದಿವಾನ್ ಅಧ್ಯಕ್ಷರು:— ಹಣದ ತೊಂದರೆ ಇಲ್ಲದಿದ್ದರೆ ಈ ಕಾಲೇಜನ್ನು ಸ್ಥಾಪಿಸುವುದು ಯುಕ್ತವೇ ಸರಿ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಲಾ ಫ್ಯಾಕಲ್ಟಿಯು ಇರಬೇಕಾದುದು ಸರಿ.

ಸರಕಾರದ ಉತ್ತರ

ಜನರಲ್ ಸೆಕ್ರೆಟರಿಯವರಾದ ಶ್ರೀ. ಜೆ. ಅಪ್ಪಾಜಿ ಗೌಡರು ಲಾ ಕಾಲೇಜನ್ನು ಸ್ಥಾಪಿಸುವ ವಿಷಯವನ್ನು ಸರಕಾರದವರು ಆಲೋಚಿಸುತ್ತಿರುವರೆಂದೂ, ಶೀಘ್ರದಲ್ಲಿಯೇ ಅವರು ತೀರ್ಮಾನಕ್ಕೆ ಬರುವರು ಎಂದೂ ನುಡಿದರು. ವಿಶ್ವವಿದ್ಯಾನಿಲಯವು ತನ್ನ ಖರ್ಚಿಗೆ ತಾನೇ ವರಮಾನ ಪಡೆಯಬೇಕೆಂಬುದನ್ನು ಸರಕಾರದವರು ಆಲೋಚಿಸುತ್ತಿರುವರು ಎಂದರು.

ಸಭೆಯು ೨೫—೧೧ ಓಟುಗಳಿಂದ ನಿರ್ಣಯವನ್ನು ಒಪ್ಪಿತು.

ಒಂದೂ ಕಲೆಯುಳಿಯದಂತೆ ಅದುವಾಸಿಮಾಡುತ್ತದೆ.

ಗಾಯ ಮತ್ತು ಹುಣ್ಣುಗಳಿಗೆ ಇದು ಉತ್ತಮ ಮುಲಾಮು.

ಗಾಯಗೊಂಡ ಇಲ್ಲವೆ ರೋಗಗ್ರಸ್ತ ಚರ್ಮದ ಮೇಲೆ ನೀವು ಸಾಂಬಕನ್ನು ಸವರಿದಾಗ, ಇದು ಶಾಂತಪಡಿಸಿ ಆತ್ಯಾಶ್ಚರ್ಯಕರವಾಗಿ ಗುಣಪಡಿಸುತ್ತದೆ. ಸಾಂಬಕ್‌ನಲ್ಲಿರುವ ಅಮೂಲ್ಯ ವನಸ್ಪತಿ ತೈಲಗಳು ನರನಾಡಿಗಳೊಳಗೆ ಹೀರಲ್ಪಟ್ಟು, ನೋವು ಶಾಂತಗೊಂಡು, ಬಾವು ತಗ್ಗಿ, ಸೋರುವುದು ಆರುತ್ತದೆ. ಸಾಂಬಕ್ ವಿಷಾಣುಗಳನ್ನು ನಾಶಗೊಳಿಸಿ ಚರ್ಮಕ್ಕೆ ಪೋಷಣೆಕೊಟ್ಟು, ಕಲೆಯೊಂದೂ ಉಳಿಯದಂತೆ ವಾಸಿಮಾಡುತ್ತದೆ. ದದ್ದು, ತುರಿಕಜ್ಜಿ, ಹುಳಕಡ್ಡಿ, ಹುಣ್ಣು, ಬೊಕ್ಕೆ, ಇತ್ಯಾದಿಗಳಿಗೆ ಇದು ಅಸಮಾನವಾದುದು. ಎಲ್ಲಾ ಔಷಧಿ ವ್ಯಾಪಾರಿಗಳೂ ಸಾಂಬಕನ್ನು ಒಂದು ರೂಪಾಯಿ ಯಾ ರೂ. ೨—೪—೦ರಂತೆ ಮಾರುತ್ತಾರೆ. ಏಜೆಂಟರು:— ಮೆಸರ್ಸ್ ದಾಧಾ & ಕೊ., ಪಿ. ಟಿ., ಮದ್ರಾಸು.

ಯಾವಾಗಲೂ ಸಾಂಬಕ್ ಉಪಯೋಗಿಸಿರಿ

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾದುದು

ಪ್ರಾಥಮಿಕ ವಿದ್ಯಾಭ್ಯಾಸ

ಪ್ರಾಥಮಿಕ ವಿದ್ಯಾಭ್ಯಾಸ ಸಮಿತಿಯ ಶಿಫಾರಸ್ಸುಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಶ್ರೀ. ಹೆಚ್. ಲಿಂಗಪ್ಪನವರು ನಿರ್ಣಯವನ್ನು ಸೂಚಿಸಿದರು.

ದ್ವಿತೀಯ ಸಚಿವರ ಉತ್ತರ

ಸರಕಾರದ ಪರವಾಗಿ ದ್ವಿತೀಯ ಸಚಿವರು ಉತ್ತರವೀಯುತ್ತ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಶ್ನೆಯು ಬಹಳ ಮುಖ್ಯವಾದುದೆಂದೂ, ಕೆಲವು ಅಂಶಗಳಲ್ಲಿ ಕಾನೂನಾಗಬೇಕಾಗಿದೆಯೆಂದೂ, ಈ ಸಂಬಂಧವಾಗಿ ಮಸೂದೆಗಳು ಮುಂದಿನ ಸುಧಾರಿತ ಶಾಸನ ಸಭೆಗಳ ಮುಂದೆ ಬರುವುದೆಂದೂ, ಶಾಲಾ ಉಪಾಧ್ಯಾಯರ ಸಾಮರ್ಥ್ಯವನ್ನು ಮತ್ತು ಸಂಬಳ ಹೆಚ್ಚಿಸುವ ವಿಷಯದಲ್ಲಿ ಸರಕಾರದವರು ಒಂದು ನಿರ್ಧಾರಕ್ಕೆ ಬರುವರು. ಪ್ರಾಥಮಿಕ ವಿದ್ಯಾಭ್ಯಾಸದ ಪ್ರಗತಿಯ ವಿಷಯದಲ್ಲಿ ಸರಕಾರವೂ — ಪ್ರಜೆಗಳೂ ಒಪ್ಪಂದಕ್ಕೆ ಬಂದು ಪರಸ್ಪರ ಸಹಾಯ ಮಾಡಬೇಕು ಎಂದರು.

ಡೆಲ್ಲಿಯಲ್ಲಿ

ಇಲ್ಲಿ ಬಂಗಾಳಿ ಪ್ರಧಾನರಾದ ವಿ. ಹಕ್ಕರೂ, ಪಂಜಾಬಿನ ಪ್ರಧಾನರಾದ ಸರ್ ಸಿಕಂದರರೂ ಲಾಲಾ ಶಂಕರಲಾಲರಲ್ಲಿ ಸೇರಿ ಕಾಕ್ಸಾರರ ಕುರಿತು ಚರ್ಚಿಸಿದರು. ಬಳಿಕ ಶ್ರೀ. ಸಿ ರಾಜಗೋಪಾಲಾಚಾರಿಯವರೂ, ಮಿಸೆಸ್ ಸರೋಜಿನಿ ನ್ಯಾಡು, ಡಾ. ಸೆಯ್ಯದ್ ಮಹಮ್ಮದ್, ಖಾನ್-ಅಬ್ದುಲ್ ಗಫೂರ್ ಖಾನ್ ಇವರು ಆ ಪ್ರಧಾನರೊಡನೆ ಸಂಧಿಸಿ, ಜಾತೀಯ ಸಮಸ್ಯೆಯ ಕುರಿತು ಚರ್ಚಿಸಿದರೆಂದು ತಿಳಿದುಬರುತ್ತಿದೆ.

ಕಾಕ್ಸಾರರ ಚಳವಳಿ ಸದ್ಯಕ್ಕೆ ನಿಂತಿದೆ

ಶ್ರೀ. ಜಿನ್ನಾರವರ ಉಪದೇಶದಂತೆ ಕಾಕ್ಸಾರರ ಈಗಿನ ಮುಖಂಡರಾದ ಡಾ. ಮಹಮ್ಮದ್ ಇಸ್ಮಾಯಲ್ ನಾವಿಯವರು ಕಾಕ್ಸಾರರ ಚಳವಳಿಯು ಸದ್ಯಕ್ಕೆ ಇದೇ ಜುಲೈ ತಾ. ೨೭ರವರೆಗೆ ನಿಲ್ಲಲೆಂದಿದ್ದಾರೆ. ಇತ್ತ ಶ್ರೀ. ಜಿನ್ನಾರವರು ಸಂಧಾನದ ಪ್ರಯತ್ನಕ್ಕೆ ಹೊರಟಿದ್ದಾರೆ.

ರಥೋತ್ಸವದಲ್ಲಿ ಗಲಭೆ

ಡಾಕಾದಲ್ಲಿ ಒಂದು ರಥೋತ್ಸವದ ಕಾಲದಲ್ಲಿ ಯಾರೋ ಒಬ್ಬ ಪುಂಡನು ಒಬ್ಬ ಹೆಂಗಸಿನ ಕೊರಳ ಹಾರವನ್ನು ಅಪಹರಿಸಲು ಯತ್ನಿಸಿದನೆಂದು ಗಲಭೆಯಾಗಿ ಮಾರಾಮಾರಿ ನಡೆದು ಹಲವರಿಗೆ ಪೆಟ್ಟಾಗಿದೆ; ಹಲವು ಗುಡಿಸಲುಗಳಿಗೆ ಬೆಂಕಿ ಕೊಟ್ಟಡ್ಡಾರೆ. ಪೋಲೀಸ್ ಬಲ ಬಂದ ಮೇಲೆ ಈ ಗಲಭೆ ಶಾಂತವಾಯಿತು. ಒಬ್ಬನ ಕೈಯಾಯಿತು.

ಸುಖದ ಭಾವನೆ...
ಆರೋಗ್ಯದ ಭಾವನೆ

ಗ್ಲಾಕ್ಸೋವಿನ ಉಪಕಾರ ಸ್ಮರಣೆ



For Registration of Patents Designs and Trade Marks write to:

C. G. ANUND & CO.,
Patent & Trade Mark Attorneys
14, Hare Street, CALCUTTA

ಹಾಲ್ವೆಲ್ ಸ್ಮಾರಕಕ್ಕಾಗಿ ಸತ್ಯಾಗ್ರಹ

ಇದುವರೆಗೆ ಬಂಗಾಳಿ ಹಿಂದೂಗಳು ಮಾತ್ರ ಈ ಸತ್ಯಾಗ್ರಹ ಹೂಡಿದ್ದರೂ, ಈಗ ಸಿಕ್ಖರು ಮುಂದೆ ಬಂದಿದ್ದಾರೆ. ಅವರಲ್ಲಿ ೫ ಮಂದಿಯ ಕೈದಾಗಿದೆ.

ಬೆಜ್ವಾಡ ಕಾಲೇಜಿಗೆ ಹೊಸ ಕಟ್ಟಡ

ಆಂಧ್ರ ವಿಶ್ವವಿದ್ಯಾನಿಲಯದ ವೈಸ ಚಾನ್ಸಲರಾದ ಡಾ. ಸಿ. ಆರ್. ರೆಡ್ಡಿಯವರು ಉಯ್ಯೂರಿನ ರಾಜಾ ರಂಗಯ್ಯರಾವ್ ಕಾಲೇಜಿನ ನೂತನ ಮಂದಿರಕ್ಕೆ ಆಸ್ತಿವಾರವನ್ನು ಹಾಕುತ್ತ ಆ ರಾಜಾ ಸಾಹೇಬರ ವಿದ್ಯಾಭಿಮಾನವನ್ನು ಕೊಂಡಾಡಿದರು.

ವಾರ್ತಾ-ಗುಚ್ಛ

ಇಂಗ್ಲೆಂಡಿನ ವಿಮಾನ ಮಂತ್ರಿಮಂಡಲಕ್ಕೆ, ಈಸ್ಟ್ ಇಂಡಿಯಾ ಫಂಡಿನಿಂದ, ವಿಮಾನಗಳನ್ನು ಕೊಳ್ಳಲು ಈಚಿಗೆ ೧೫ ಸಾವಿರ ಪೌಂಡುಗಳನ್ನು ಕಳುಹಿಸಲಾಗಿದೆ. ಹೀಗೆ ಇದುವರೆಗೆ ಅಲ್ಲಿಗೆ ಈ ಫಂಡಿನಿಂದ ಕೊಟ್ಟ ಮೊತ್ತ ೫೫,೦೦೦ ಪೌಂಡುಗಳು. ಇದರಿಂದ ೫ ವಿಮಾನಗಳನ್ನು ಕೊಳ್ಳಬಹುದಾಗಿದೆ.

ಹಾತೌರದ ಗುಂಡಿನ ಮೊಳದ್ದಮೆಯಲ್ಲಿ ದಂಡನೆಗೆ ಗುರಿಯಾದ ಅಲ್ಲಿನ ರಾಜರನ್ನೂ, ರಾಜಮಾತೆಯನ್ನೂ ೨೦—೨೦ ಸಾವಿರದ ಜಾಮೀನುಗಳ ಮೇಲೆ ತಾತ್ಕಾಲಿಕವಾಗಿ ಬಿಡುಗಡೆ ಮಾಡಲಾಗಿದೆ.

ಈಚಿಗೆ ಕೆಲ ಕಾಲದಿಂದ ಅಸ್ವಸ್ಥದಲ್ಲಿರುವ ಬೇಗಂ ಮಹಮ್ಮದ್ ಆಲಿಯವರನ್ನು ಡಿಲ್ಲಿಯಲ್ಲಿ ನುಹಾತ್ಮರೂ, ಪಂಡಿತ ನೆಹರುಗಳೂ ಖಾನ್ ಅಬ್ದುಲ್ ಗಫರ್‌ಖಾನ್‌ರವರೂ, ಡಾ. ಎಸ್.ಎಸ್. ಏನ್ಸಾರಿಯವರೂ ನೋಡಿಕೊಂಡು ಬಂದರು.

ಆಯುಧಗಳ ಸಮೇತ ಮೆರವಣಿಗೆ ಕೂಡದೆಂದು ಲಾಹೋರಿನಲ್ಲಿ ಕೆಲವು ನಿರ್ಬಂಧಗಳೇರ್ಪಟ್ಟವೆ. ಲೈಸನ್ಸ್ ಪಡೆದ ಮೆರವಣಿಗೆಗೆ ಈ ವಿಧಿ ಲಗಾವಲ್ಲ.

ಯುದ್ಧ ಆರಂಭವಾದಂದಿನಿಂದ, ಇದುವರೆಗೆ ಇಂಡಿಯವು ಒದಗಿಸಿದ ಯುದ್ಧ ಸಾಮಗ್ರಿಗಳ ವಿವರ ಹೀಗಿದೆ:—ಚಿಕ್ಕ ಕೋವಿಗಳಿಗೆ ೭೫,೦೦೦,೦೦೦ ರೌಂಡುಗಳ ಮದ್ದು; ೨ ಲಕ್ಷ ಶೆಲ್ಸ್; ೬ ಸಾವಿರ ರೈಫೆಲ್ಸ್, ೮೫೦೦ ಡೇರೆಗಳು; ೪,೫೦೦,೦೦೦ ಮರಳಿನ ಚೀಲಗಳು. ಅಲ್ಲದೆ ೧೦ ಸಾವಿರ ಯುದ್ಧೋಪಕರಣ ಯಂತ್ರಗಳು, ೬ ಲಕ್ಷ ಬ್ಲಾಂಕೆಟ್, ೩,೦೦೦,೦೦೦ ಗಜ ಖಾಕೀ ಡ್ರಿಲ್, ೧೫ ಲಕ್ಷ ಜತೆ ಬೂಟ್ಸ್, ೨೦ ಸಾವಿರ ದೊಡ್ಡ ಕೋಟ್, ೭೩ ಸಾವಿರ ಗ್ರೌಂಡ್ ಶೀಟ್; ೧೭ ಸಾವಿರ ಜೀನುಗಳು.

ವಿನ್ಸ್‌ಟನ್ ಚರ್ಚಿಲ್

ವಿನ್ಸ್‌ಟನ್ ಚರ್ಚಿಲ್— ಬ್ರಿಟನ್ನಿನ ಪ್ರಧಾನರು, ಇಂದು ಬ್ರಿಟಿಷ್ ಸಾಮ್ರಾಜ್ಯದ ರಕ್ಷಣೆಗಾಗಿ, ಸ್ವಾತಂತ್ರ್ಯವನ್ನು ಉಳಿಸುವುದಕ್ಕಾಗಿ ಕಾದಾಡುವ ಮೊದಲನೆಯ ವೀರ. ಜರ್ಮನರ ಪರಮ ವಿರೋಧಿ. ಇವರನ್ನು ಜರ್ಮನರು ವಿರೋಧಿಸುವಷ್ಟು ಮತ್ತಾವ ಬ್ರಿಟಿಷನನ್ನೂ ವಿರೋಧಿಸುತ್ತಿಲ್ಲವೆನ್ನಬಹುದು. ಜರ್ಮನಿ ತಲೆ ಎತ್ತಿ ಲೋಕ ಕಂಟಕವಾಗುತ್ತಿದೆ, ಇನ್ನೊಂದು ಮಹಾಯುದ್ಧ ಸನ್ನಿಹಿತವಾಗುತ್ತಿದೆ, ಬ್ರಿಟನ್ನು ಸಿದ್ಧವಾಗಬೇಕೆಂದು ಒಬ್ಬಂಟಿಗನಾಗಿ ಹಲವು ವರುಷಗಳಿಂದ ಸಾರಿದವರಿವರು!

ಮಂತ್ರಿಮಂಡಲದಲ್ಲಿ ಇವರಂತೆ ಸಾವಿನ ದವಡೆಯಿಂದ ಪಾರಾಗಿ ಉಳಿದ ಆದೃಷ್ಟಶಾಲಿಗಳೂ ಬೇರೆ ಇಲ್ಲ. ೧೯೯೪ರಲ್ಲಿ ಈಜಿಪ್ತ್‌ನಲ್ಲಿ ನಡೆದ ಅಶ್ವಸೇನಾ ಕಾಳಗದ ನಾಯಕರಿವರಾಗಿದ್ದರು. 'ಬೋರ್' ಸಮರದಲ್ಲಿ ಸೆರೆ ಸಿಕ್ಕಿದರು,—ಆದರೆ ತಪ್ಪಿಸಿಕೊಂಡರು.

೧೯೧೪ರಲ್ಲಿ ಎಂಟ್‌ವರ್ಪ್‌ನ ರಕ್ಷಣೆಗೆ ಬ್ರಿಟಿಷ್ ನೌಕಾ ದಳವನ್ನು ಕಳುಹಿಸಿ ತಾನೇ ಸೂತ್ರ ಚಾಲಕತ್ವ ವಹಿಸಿದರು. ೧೯೧೬ರಲ್ಲಿ ಪ್ರಧಾನ ಪಟ್ಟವನ್ನುಳಿದು, ೬ನೇ ರೋಯಲ್ ಸ್ಕೋಟ್ಸ್ ಫ್ಯುಸಿಲಿಯರ್ಸ್ ದಳದ ನಾಯಕತ್ವ ವಹಿಸಲು ಫ್ರಾನ್ಸಿಗೆ ತೆರಳಿದರು.

ಚರ್ಚಿಲ್ಲರು ರಾಜಕಾರಣದಲ್ಲಿ ಕಾಲಿಕ್ಕಿದುದು ೧೯೦೦ರಲ್ಲಿ. ಇವರಿಗೆ ಈ ಸಾಹಸದಲ್ಲಿ ಬಂದ ತೊಡಕುಗಳು ಅಪಾರ. ಆದರೆ ಅವೆಲ್ಲವನ್ನು ಇದಿರಿಸಿ ಮುಂದಾದ ಸಾಹಸಿ ಇವರು!

ಶೀಘ್ರ ವಿಚಾರಕ್ಕೆ ಇವರು ಹೆಸರಾಂತವರು. ಅದೆಂತಹ ಭೀಕರ, ಸಮಸ್ಯಾತ್ಮಕ ವಿಚಾರ ಬಂದರೂ, ಜಾಣ್ಮೆಯಿಂದ, ಕೂಡಲೇ ಬಿಡಿಸಬಲ್ಲ ಗಟ್ಟಿಗರಿವರು.

ಹೋಮ್ ಸೆಕ್ರೆಟರಿಗಳಾಗಿದ್ದಾಗ ಸಿಡ್ನಿ ಸ್ಟ್ರೀಟ್ ಕಾಳಗದಲ್ಲಿ ತಾನಾಗಿಯೇ ಕೈಯಿಕ್ಕಿ ಕಠಿನ ಟೀಕೆಗಳಿಗೆ ಗುರಿಯಾದರು. ಆದರೆ, ಕಷ್ಟ, ಟೀಕೆಗಳೆಲ್ಲವನ್ನು ಇದಿರಿಸಲು ಇವರು ಸದಾ ಸಿದ್ಧರೇ.

ಲಾರ್ಡ್ ಹೆಲಿಫೇಕ್ಸ್

ಇಂದಿನ ಪರ ರಾಷ್ಟ್ರ ವಿಚಾರದ ಮಂತ್ರಿಗಳು, ಲಾರ್ಡ್ ಹೆಲಿಫೇಕ್ಸರು ಕಾಳೆಗದಲ್ಲಿ ನುರಿತವರೇ ಆಗಿದ್ದಾರೆ. ಫ್ರಾನ್ಸಿನಲ್ಲಿ ಯೋರ್ಕ್‌ಶಯರ್ ಡ್ರೇಗೂನ್ ಯೇವೆನ್ರೀಯಲ್ಲಿ ಇವರು ಹಿಂದೆ ಕೆಲಸ ಮಾಡಿ, ವೀರರೆಂದು ಕೀರ್ತಿ ಗಳಿಸಿದ್ದರು.

ಬ್ರಿಟನ್ನಿನ ಹೆಸರಾಂತ ಕೃಷಿ ಇಲಾಖೆಯ ಪ್ರಧಾನರೆಂದು ಹೆಸರುಗೊಂಡ ಇವರು ೧೯೨೬ರಲ್ಲಿ ಹಿಂದುಸ್ಥಾನಕ್ಕೆ ವೈಸ್‌ರಾಯಿಗಳಾಗಿ ಬಂದರು.

ಆ ಕಾಲದಲ್ಲಿ ಒಮ್ಮೆ ಇವರು ಪ್ರಯಾಣ ಬೆಳೆಸುತ್ತಿದ್ದ ರೈಲಿನ ಅಡಿಯಲ್ಲೇ ಬಾಂಬೊಂದು ಸಿಡಿಯಿತು. ಅಧಿಕಾರಿಗಳು ಇವರ ಗಾಡಿಯ ಕಡೆಗೆ ಧಾವಿಸಿದಾಗ ಹೆಲಿಫೇಕ್ಸರು ಉಣ್ಣುತ್ತಿದ್ದುದನ್ನು ಕಂಡರು. ಅಂತಹ ನಿರ್ಭಯ ಅವರಿಗೆ!

೧೯೨೬ರಿಂದ ೧೯೩೧ರತನಕ ಭಾರತದ ವೈಸ್ರಾಯಿಗಳಾಗಿ ಬ್ರಿಟನ್ನಿಗೆ ಹಿಂತಿರುಗಿದರು. ಆಂದಿನಿಂದ ಇದುವರೆಗೆ ವಿದ್ಯೆ, ಸಮರ ಖಾತೆಗಳ ಮಂತ್ರಿಗಳಾಗಿ, ಲಾರ್ಡ್ ಪ್ರಿವಿ ಸೀಲ್, ಲಾರ್ಡ್ ಪ್ರೆಸಿಡೆಂಟ್ ಆಫ್ ದಿ ಕೌನ್ಸಿಲ್ ಹಾಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಚಾನ್ಸಲರ್ ಆಗಿ ಇವರು ಕೆಲಸ ನಿರ್ವಹಿಸಿದ್ದಾರೆ. ಇಂದಿನ ಬ್ರಿಟನ್‌ನ ಮಂತ್ರಿಮಂಡಲದಲ್ಲಿ ಪರರಾಷ್ಟ್ರ ವಿಚಾರದ ಮಂತ್ರಿಗಳಿವರು!

ಸರ್ ಎ. ಸಿಂಕ್ಲೈರ್

ಸರ್ ಆರ್ಚಿಬಾಲ್ಡ್ ಸಿಂಕ್ಲೈರ್ ರಾಜಕಾರಣದಲ್ಲಿ ಕೈ ಇಳುಹುವದಕ್ಕಿಂತ ಮುಂದೆ ಸೈನಿಕರಾಗಿದ್ದರು. ೧೯೧೦ರಲ್ಲಿ ಸೇನೆಯನ್ನು ಸೇರಿ ೧೯೧೪ರಲ್ಲಿ ಫ್ರಾನ್ಸಿನಲ್ಲಿ ಕಾದಾಡಲು ಮುಂದಾದರು.

ಯುದ್ಧ ಪೂರ್ವದಲ್ಲಿ "ಲೈಫ್ ಗಾರ್ಡ್"ನಲ್ಲಿದ್ದ ಇವರನ್ನು, ಚರ್ಚಿಲ್ಲರು ತಾನು ಫ್ರಾನ್ಸಿಗೆ ತೆರಳಿದಾಗ ತನ್ನ ಕೈಕೆಳಗಣ ನಾಯಕನನ್ನಾಗಿ ಸಿಂಕ್ಲೈರ್‌ರನ್ನು ನೇಮಿಸಿಕೊಂಡರು. ಅಂದಿನಿಂದಲೂ ಲಿಬರಲ್ ನಾಯಕರಾದ ಇವರಿಗೆ ತಮ್ಮ ಹಿಂದಿನ ಅಧಿಕಾರಿಯಾಗಿದ್ದ ಚರ್ಚಿಲ್ಲರ ಮೇಲೆ ಅಸಮಾನ ಅಭಿಮಾನ.

ಇವರ ವಯಸ್ಸು ೪೯ ಆದರೂ ೧೯೨೨ರಿಂದ ಪಾರ್ಲಿಮೆಂಟ್ ಸದಸ್ಯರಾಗಿ ಕೆಲಸ ಮಾಡಿದ್ದರೆ, ಸಂಪೂರ್ಣವಾಗಿ ಲಿಬರಲ್ ಆಗಿಯೇ ಇದ್ದಾರೆ. ಪಾರ್ಲಿಮೆಂಟ್ ಸದಸ್ಯರಲ್ಲೆಲ್ಲಾ ಸುಂದರರೆಂದು ಹೆಸರಾಂತ ಇವರು ಸಕಲರ ಸ್ನೇಹಕ್ಕೆ ಪಾತ್ರರಾಗಿದ್ದಾರೆ. ವಿಮಾನ ಖಾತೆಯ ಕಾರ್ಯದರ್ಶಿಗಳಾಗಿ ಇಂದಿನ ಬ್ರಿಟಿಷ್ ಮಂತ್ರಿಮಂಡಲದಲ್ಲಿ ಕೆಲಸ ನಡೆಸುತ್ತಿದ್ದಾರೆ!

ಕಿಂಗ್ಸ್‌ಲೀ ಉಡ್

ಇಂದಿನ ಛಾನ್ಸಲರ್ ಓಫ್ ಎಕ್ಸ್‌ಚೆಕ್ಕರ್ ಆಗಿರುವ ಕಿಂಗ್ಸ್‌ಲೀ ಉಡ್ ಕಾರ್ಯ ಜಾಣನೆಂದು ಪ್ರತೀತರಾಗಿದ್ದಾರೆ. ಜನತೆಯ ಮುಂದೆ ನಿಂದು, ಬೆಳಕಿಗೆ ಬಂದು ಇವರು ಕೆಲಸ ಮಾಡದಿದ್ದರೂ, ಇವರ ಹೆಸರೂ—ಕೆಲಸಗಳೂ ಜನತೆಯಲ್ಲಿ ಭರವಸೆ ತುಂಬಿವೆ.

ತನ್ನ ಜಾಣ್ಮೆಯಿಂದ ಕಾರ್ಯನಿರ್ವಹಣೆತೆಗೇ ತಿರುಗಿ ವರ್ತಿಸುವ ಇವರಿಂದ ಇಂದಿನ ಮಂತ್ರಿಮಂಡಲದ ಬಲ ಹೆಚ್ಚದಿರದು. ದಿವಂಗತ ಆರ್ಥರ್ ಉಡ್‌ರವರ ಕುಮಾರರಾದಿವರು ೧೯೮೧ರಲ್ಲಿ ಹಲ್‌ನಲ್ಲಿ ಜನಿಸಿದರು.

ಎ. ವಿ. ಅಲೆಕ್ಸಾಂಡರ್

ಕಳೆದ ಮಹಾಯುದ್ಧದಲ್ಲಿ ಭಾಗವಹಿಸಿ ಕೇಪ್ಟನ್ ತರಗತಿಗೆ ಏರಿದವರಿವರು. ೧೯೨೨ರಲ್ಲಿ ಹಿಲ್ಸ್‌ಬರೋ ಡಿವಿಜನಿನ ಹೆಚ್ಚಿನ ಸದಸ್ಯರಾಗಿ ಪಾರ್ಲಿಮೆಂಟನ್ನು ಸೇರಿದರು. ೧೯೨೪ರಲ್ಲಿ ಬೋರ್ಡ್ ಆಫ್ ಟ್ರೇಡಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದರು. ೧೯೨೯ರಿಂದ ೩೧ರ ತನಕ ಫರ್ಸ್ಟ್ ಲಾರ್ಡ್ ಓಫ್ ಎಡ್ಮಿರಾಲಿಟಿ ಆಗಿ ದುಡಿದರು. ಸಬ್‌ಮೆರಿನ್‌ಗಳಿಗೆ ಅದರೊಳಗಿನ ಮಂದಿಯ ಪ್ರಾಣ ರಕ್ಷಣೆಗಾಗಿ "ಡೇವಿಸ್" ಪರಾರಿ ಸಾಧನ ಪ್ರಯೋಗಿಸಿದ ಸಾಹಸ ಇವರದೇ ಇಂದಿನ ಮಂತ್ರಿಮಂಡಲದಲ್ಲೂ ಇವರು ಫರ್ಸ್ಟ್ ಲಾರ್ಡ್ ಓಫ್ ಎಡ್ಮಿರಾಲಿಟಿ.

ಸಂಸಾರದಲ್ಲಿ ಶಾಂತಿಯು ನೆಲಸಿತು


ವಿಮಲಳು ಬರಬರುತ್ತಾ ಅಶಾಧ್ಯಳಾಗಿರುವಳು. ನಿನ್ನೆ ನನಗೆ ಬಹಳ ನಾಚಿಕೆಯಾಯಿತು. ಕಲಕ್ಕರ ಹೆಂಡತಿ ಬಂದಿದ್ದರು. ಇಲ್ಲಾ ನಮ್ಮ ವಿಮಲ ಒಡವೆಗಳೂ ಇಲ್ಲದೆ ತಲೆಯಲ್ಲಾ ಹೂವು ಇಲ್ಲದೆ ಒಂದು ಹಳೇ ಸೀರೆಯನ್ನು ಸುತ್ತಿಕೊಂಡು ನಿಂತಿದ್ದಳು. ಯಾವ ವಿಷಯದಲ್ಲೂ ನಾವು ಹೇಳುವುದನ್ನು ಅವಳು ಗಮನಿಸುವುದಿಲ್ಲ
ಏನು ಮಾಡುವುದಮ್ಮ ಅವಳಗೇನಾಗಿದೆಯೋ ನನಗೆ ತಿಳಿಯದು. ಮೊದ ಮೊದಲು ಅವಳು ಏಷ್ಟೋ ಉತ್ಸಾಹಭರಿತಳಾಗಿರುತ್ತಿದ್ದಳು
ನಿನಗಾಗಿರುವದಾದರೂ ಏನು. ನಿಮಲಾ, ಅಮ್ಮನು ಸದಾ ನಿನ್ನ ವಿಷಯದಲ್ಲಾ ದೋಷವನ್ನು ಹುಡುಕುತ್ತಲೇ ಇರುತ್ತಾಳೆ. ಅಲ್ಲದೆ ಮಕ್ಕಳೂ ಶಾಲೆಗೆ ಪುನಃ ಹೊತ್ತು ಮೀರಿ ಬಂದರೆಂದು ಮುಖ್ಯೋಪಾಧ್ಯಾಯರಿಂದ ಕಾಗದವು ಬಂದಿದೆ
ಅಯ್ಯೋ, ನನಗೇಕೋ ಬಹಳ ಕಷ್ಟವಾಗಿದೆ, ನಿಮ್ಮ ತಾಯಿಯನ್ನು ಸಂತೋಷಪಡಿಸಲು ನಾನು ಎಷ್ಟೋ ಕಷ್ಟಪಡುತ್ತೇನೆಂಬುದನ್ನು ನೀವು ಬಲ್ಲಿರಿ. ಮಕ್ಕಳನ್ನು ಸುಧಾರಿಸುವುದು ನನ್ನಿಂದ ಸರ್ವಥಾ ಆಗದು. ಅತಿ ನಿತ್ರಾಣವೂ ಆಯಾಸವೂ ಆದಂತೆ ಅನಿಸುತ್ತದೆ. ಬಳಗ್ಯೆ ಏಳುವಾಗಲೂ ಸಹ ಬಳಲಿರುತ್ತೇನೆ
ಗಂಡನು ವೈದ್ಯನನ್ನು ಕರೆತರುವನು
ನನ್ನ ಹೆಂಡತಿಗೆ ಪ್ರಬಲವಾದ ಖಾಯಿಲೆಯೇನಾದರೂ ಇದಯ? ಅಷ್ಟೇಕೆ ಅವಳು ಬಳಲಿ ಬೆಂಡಾಗಿರಬೇಕು?
ವಾಸ್ತವದಲ್ಲಿ ಅಂತದು ಪ್ರಮಾದವೇನೂ ಇಲ್ಲ. ಏಳುವಾಗ ಬಳಲಿರುವುದಕ್ಕೆ ಕಾರಣವೇನೆಂದರೆ, ಹಗಲು ವೆಚ್ಚವಾದ ಶಕ್ತಿಯು ರಾತ್ರಿ ನಿದ್ರಿಸುವಾಗ ಪುನಃ ಕೂಡಿಕೊಳ್ಳುವುದಿಲ್ಲ. ಇದನ್ನೇ ನಾವು 'ಪ್ರಾತಃಕಾಲದ ದೌರ್ಬಲ್ಯ' ವೆಂದು ಕರೆಯುವುದು. ಪ್ರತಿ ರಾತ್ರಿ ಮಲಗುವಾಗ ಒಂದು ಲೋಟ 'ಹಾರ್ಲಿಕ್ಸ್' ಸೇವಿಸಿದರೆ ಇದು ಸರಿ ಹೋಗುತ್ತದೆ
ಹಾರ್ಲಿಕ್ಸ್ ಅದ್ಭುತ ಕಾರ್ಯಮಾಡಿತು
ಇದು ಅತಿ ರುಚಿಕರವಾಗಿದೆ. ಮತ್ತು ನನಗೊಂದು ನವ ಪ್ರಪಂಚವನ್ನೇ ಕಟ್ಟಿಸುತ್ತಿದೆ
ಆರು ವಾರಗಳ ತರುವಾಯ
(ಸ್ವಗತ) ಹಾರ್ಲಿಕ್ಸ್‌ಗೆ ಧನ್ಯವಾದಗಳು.
ಆಹಾ! ಆ ನೀರಯ್ಯು ನನಗೆಷ್ಟು ಚನ್ನಾಗಿ ಒಪ್ಪಿದೆ. ವಿಮಲಾ! ಇಂಗೆ ನೀನು ಆ ಪರದಾಪಾರ್ಟಿಗೆ ಹೋಗುವುದು ನನಗೆಷ್ಟು ಹೆಮ್ಮೆ!
ನೀವು ಕೃಪ್ತರಾದುದು ನನಗೆಷ್ಟೋ ಹರ್ಷವಾಗಿದೆ. ನೀವು ಇನಗೆನ್ನಂತ ಕಾಯಿಯಂತೆಯೇ ಇರುವಿರಿ
ಹಾರ್ಲಿಕ್ಸ್ ಸೇವಿಸಿದ ನೂರಪ್ಪು ಪುಷ್ಟಿಕರವಾಗಿರುವುದರಿಂದ ಅಲಸಿಕೆಯನ್ನು ಚೈತನ್ಯವನ್ನಾಗಿ ಮಾರ್ಪಡಿಸುತ್ತದೆ. ಹಾರ್ಲಿಕ್ಸ್‌ನಲ್ಲಿ ತುಂಬಿಕೆಯುಳ್ಳ ಹಸುವಿನ ಹಾಲು ಮತ್ತು ಪುಷ್ಟಿಯನ್ನು ಮಾಡುವ ಬಾರ್ಲಿ ಮತ್ತು ಗೋದಿಯ ಸಾರವು ಸೇರಿರುತ್ತದೆ. ಅದರಲ್ಲಿ ಹಿಟ್ಟು ಲೇಶವೂ ಇಲ್ಲ. ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುವ ಹಾರ್ಲಿಕ್ಸ್ ಗ್ಲಾಸ್ ಮಿಕ್ಸರ್ ಅನ್ನೇ ಉಪಯೋಗಿಸಿರಿ.
HORLICKS
Horlicks Mixer

ನಿಮಗೆ ಸರಿಯಾಗಿ ನಿದ್ರೆಬಾರದಿದ್ದರೆ, ಆಯಾಸದಿಂದ ಎದ್ದರೆ, ಅಶಕ್ತರೂ, ನಿರುತ್ಸಾಹಿಗಳೂ ಆದರೆ, ನೀವು "ಪ್ರಾತಃಕಾಲದ ದೌರ್ಬಲ್ಯ" ದಿಂದ ಪೀಡಿತರಾಗಿರುವಿರಿ.

ಹಾರ್ಲಿಕ್ಸ್ ತೆಗೆದುಕೊಳ್ಳಿರಿ

ಸುಖವಾಗಿ ನಿದ್ರಿಸುವಿರಿ. ಉತ್ಸಾಹದಿಂದ ಏಳುವಿರಿ. ಮತ್ತು ದಿನವೆಲ್ಲಾ ಹೆಚ್ಚು ಚೈತನ್ಯದಿಂದಿರುವಿರಿ.

P22

ಮೈಸೂರು ಸಂಸ್ಥಾನದ ಸುದ್ದಿಗಳು

(ಸ್ವಂತ ಸುದ್ದಿಗಾರರಿಂದ) ಬೆಂಗಳೂರು; ಜುಲಾಯಿ ೮

ಮೈಸೂರು ಗ್ರಾಮಗಳ ಪ್ರಶಂಸೆ

ಮೈಸೂರಿನ ಕೈಗಾರಿಕೆಗಳು ಹೇಗೆ ಹೊರಗಿನವರ ಕುತೂಹಲವನ್ನು ಹೆಚ್ಚುಸುತ್ತಿವೆಯೋ ಹಾಗೆಯೇ ಮೈಸೂರಿನ ಮಾದರೀ ಗ್ರಾಮಗಳು ಸಹಾ ಎಲ್ಲರ ಮನಸ್ಸನ್ನೂ ಸೆಳೆಯುತ್ತಿವೆ. ಮೈಸೂರಿನ ಮಾದರೀ ಗ್ರಾಮಗಳನ್ನು ನೋಡಿದ ಹೊರತು ಮೈಸೂರನ್ನು ನೋಡಿದಂತಾಗಲಿಲ್ಲ ಎಂಬುದಾಗಿ ಟಹರಿಫರ್ವಾಲ್ ಸಂಸ್ಥಾನದ ಮಹಾರಾಜರವರೂ ಅವರ ಪರಿವಾರದವರೂ. ಲಂಡನ್ನಿನ ವೃತ್ತಪತ್ರಿಕೋದ್ಯೋಗಿಗಳೂ ಆದ ಮಿ॥ ಗೈವಿಂಟನ್‌ರೂ ಪ್ರಶಂಸಿಸಿದ್ದಾರೆ.

ಸಂಸ್ಥಾನದಲ್ಲಿ ಗುಂಡುಮದ್ದುಗಳ ಸೆನ್‌ಸಸ್ ಸರಕಾರದ ಆಜ್ಞೆ

ಮೈಸೂರು ಸಂಸ್ಥಾನದಲ್ಲಿರುವ ಮದ್ದು ಗುಂಡುಗಳೆಲ್ಲದರ ಸೆನ್‌ಸಸ್‌ನ್ನು ತೆಗೆದುಕೊಳ್ಳ ಬೇಕೆಂದು ಮೈಸೂರು ಸರಕಾರವು ಆಲೋಚಿಸಿ ಆಜ್ಞೆಯನ್ನು ಹೊರಡಿಸಿರುವದು. ಸೆನ್‌ಸಸ್ ಕೆಲಸವು ಮುಂದಿನ ಆಗಸ್ಟ್ ೩೧ನೇ ತಾರೀಕಿನೊಳಗೆ ಮುಗಿಯಬೇಕಾಗಿದೆ. ಅಮಲ್ದಾರರು ತಾಲೂಕುಗಳಲ್ಲಿಯೂ, ಡೆಪ್ಯುಟಿ ಅಮಲ್ದಾರರು ಸಬ್ ತಾಲೂಕುಗಳಲ್ಲಿಯೂ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಪೋಲೀಸ್ ಸುಪರಿಂಟೆಂಡೆಂಟರೂ, ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಪೋಲೀಸ್ ಸ್ಪೆಶಲ್ ಸುಪರಿಂಟೆಂಡೆಂಟರೂ ಸೆನ್‌ಸಸ್ ಕಾರ್ಯವನ್ನು ತೆಗೆದು ಕೊಳ್ಳುವರು.

ಸೆಂಟ್ರಲ್ ರೆಕ್ರೂಟ್‌ಮೆಂಟಿನ ಕೊನೆಯ ಸಭೆಯು ದ್ವಿತೀಯ ಸಚಿವರಾದ ರಾಜಮಂತ್ರಿ ಪ್ರವೀಣ ಕೆ. ವಿ. ಆನಂತರಾನುನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಶ್ರೀ. ಕೆ. ವಿ. ಭಾಷ್ಯಂ ಅಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ೧೨ ಮಂದಿ ಸದಸ್ಯರು ಆಗಮಿಸಿದ್ದರು.

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯನ್ನು ೨೭ ಮತ್ತು ೨೮ನೇ ತಾರೀಕುಗಳಲ್ಲಿ ತಿಪಟೂರಿನಲ್ಲಿ ನಡೆಸಬೇಕೆಂಬು ತೀರ್ಮಾನಿಸಿತು. ವರ್ಕಿಂಗ್ ಕಮಿಟಿಯು ಶಾಸನ ಸಭೆಗಳಿಗೆ ನಡೆಯಲಿರುವ ಚುನಾವಣೆಗಳನ್ನು ಮುಂದುವರಿಸಿದ ವಿಷಯವನ್ನು ಚರ್ಚಿಸಿತು. ವರ್ಕಿಂಗ್ ಕಮಿಟಿಯ ಮುಂದಿನ ಅಧಿವೇಶನವು ೨೧ನೇ ತಾರೀಕಿಗೆ ನಡೆಯುವುದು.

ಮೈಸೂರಿನಲ್ಲಿ ವೈಮಾನಿಕ ಶಿಕ್ಷಣ ವ್ಯವಸ್ಥೆ ಸರಕಾರದ ಯೋಜನೆ

ಮೈಸೂರು ಸರಕಾರದವರು "ಶ್ರೀ ಕೃಷ್ಣರಾಜೇಂದ್ರ ವಾರ್ ಫೈಲಟ್ ಟ್ರೈನಿಂಗ್ ಸೆಂಟರ್" ಎಂಬ ವೈಮಾನಿಕ ಶಿಕ್ಷಣ ಕೇಂದ್ರವನ್ನು ಬೆಂಗಳೂರಿನಲ್ಲಿ ಏರ್ಪಡಿಸಬೇಕೆಂದು ಆಲೋಚಿಸುತ್ತಿದ್ದಾರೆ. ಇದಕ್ಕೆ ೧೨ ಲಕ್ಷ ರೂಪಾಯಿಗಳು ಖರ್ಚಾಗುವುದೆಂದೂ, ೫೦ರಿಂದ ೧೦೦ ಮುಂದಿ ಮೈಸೂರು ತರುಣರಿಗೆ ವೈಮಾನಿಕ ಶಿಕ್ಷಣವನ್ನು ಕೊಡಲಾಗುವುದೆಂದೂ ಹೇಳಲಾಗಿದೆ.

ಯಲಹಂಕದ ಬಳಿ ಇರುವ (ಬೆಂಗಳೂರಿಗೆ ೫ ಮೈಲಿ) ಜಕ್ಕೂರು ವಿಮಾನ ನಿಲ್ದಾಣವನ್ನು ಇದಕ್ಕೋಸ್ಕರ ಉಪಯೋಗಿಸಿಕೊಳ್ಳಲಾಗುವುದು.

ಈ ಶಿಕ್ಷಣಕ್ಕೆ ಅತ್ಯಗತ್ಯವಾದ ಒಂದು ಬಾಂಬರ್ ವಿಮಾನವನ್ನೂ ಅದಕ್ಕೆ ಸಂಬಂಧಿಸಿದ ಪ್ರವೀಣರನ್ನೂ ದಯಪಾಲಿಸಬೇಕೆಂದು ಮೈಸೂರು ಸರಕಾರದವರು ಇಂಡಿಯಾ ಸರಕಾರದವರನ್ನು ಕೇಳಿರುವರೆಂದು ಗೊತ್ತಾಗಿದೆ

ಈಗ ಸಾರ್ವಭೌಮ ಸರಕಾರಕ್ಕೆ ಕೊಡುತ್ತಿರುವ ಪೊಗದಿಯಲ್ಲಿ ಅರ್ಧಭಾಗವನ್ನು ಇದಕ್ಕೋಸ್ಕರ ಉಪಯೋಗಿಸಲ್ಪಾಗುವುದೆಂದು ಸರಕಾರದವರ ಅಭಿಪ್ರಾಯ. ಉಳಿದ ಅರ್ಧ ಹಣವನ್ನು ಯುದ್ಧ ಪರಿಹಾರ ನಿಧಿಗೆ ಕೊಡುವರೆಂದು ತಿಳಿಯಲಾಗಿದೆ. ಇಲ್ಲಿ ಶಿಕ್ಷಣ ಪಡೆದ ಯುವಕರನ್ನು ಸಂದರ್ಭಾನುಸಾರ ಸೈನ್ಯ ಸೇವೆಗೆ ಕಳುಹಿಸಲಾಗುವುದು. ಮೈಸೂರಿನವರಿಗೆ ಮಾತ್ರ ಈ ಶಿಕ್ಷಣವನ್ನು ಕೊಡಲಾಗುವುದು.

ಈ ಯೋಜನೆಯು ಈಗ ದಿವಾನರ ಪ್ರಥಮ ಸಚಿವರ ಪರ್ಯಾಲೋಚನೆಯಲ್ಲಿರುವುದು. -

ಕಸೂತಿ ಕೆಲಸದ ಪ್ರದರ್ಶನ

ಬೆಂಗಳೂರು ದಂಡಿನ ಮೇಯೋ ಹಾಲಿನಲ್ಲಿ ಕಸೂತಿ ಕೆಲಸಗಳ ಪ್ರದರ್ಶನವು ನಡೆಯಿತು. ಇದರ ಆರಂಭೋತ್ಸವನ್ನು ಪ್ರಿನ್ಸಸ್ ಆಫ್ ಬೀರಾರ್‌ರವರು ನೆರವೇರಿಸಿದರು,

೬೦೦ ರೂಪಾಯಿ ಜುಲ್ಮಾನೆ

ಬೆಂಗಳೂರು ದಂಡಿನ ಮಾಜೀ ಪೋಲೀಸ್ ಪ್ರೊಸಿಕ್ಯೂಟಿಂಗ್ ಇನ್ಸ್‌ಪೆಕ್ಟರರಾದ ಶ್ರೀ. ಅಪ್ಪಯ್ಯರವರು ದುಡುಕಿನಿಂದಲೂ ಮತ್ತು ಉಪೇಕ್ಷೆಯಿಂದಲೂ ಮೋಟಾರನ್ನು ಡ್ರೈವ್ ಮಾಡಿ ಕೊಂಡುಹೋಗಿ ತೀವ್ರ ಗಾಯವನ್ನುಂಟು ಮಾಡಿದುದರಿಂದ, ೬೦೦ ರೂಪಾಯಿ ಜುಲ್ಮಾನೆಯ ಬಗ್ಗೆ ಬಂದಿದ್ದ ಅಪೀಲಿನಲ್ಲಿ ಬೆಂಗಳೂರು ದಂಡಿನ ಅ॥ ಸೆಷನ್ ಜಡ್ಜರಾದ ಮಿ॥ ಸ್ಯಾಸ್ಯಾಮ್‌ರವರು ತೀರ್ಪನ್ನಿತ್ತು ಹಿಂದಿನ ಕೋರ್ಟಿನ ತೀರ್ಪನ್ನೇ ಖಾಯಂ ಮಾಡಿದರು.

ವಿವಿಧ ರಾಷ್ಟ್ರಗಳ ಶಕ್ತಿ–ಸಾಮರ್ಥ್ಯ

[೧ನೇ ಪುಟದಿಂದ]

ಇಟೆಲಿ

ಜನಸಂಖ್ಯೆ–೪೩೫೭೨ ಸಾವಿರ. ವಿಶಾಲ–೧೭೮೭೫೬ ಚದರ ಮೈಲಿಗಳು. ಇದರ ವಸಾಹತುಗಳು ಮುಖ್ಯವಾಗಿ ಆಫ್ರಿಕೆಯಲ್ಲಿವೆ. ೧೯೩೯ರ ಏಪ್ರಿಲ್ ೭ರಂದು ಇದು ಬಲಾತ್ಕಾರವಾಗಿ ೧೦೬೨೯ ಚದರ ಮೈಲಿಗಳ ವಿಸ್ತಾರವಿದ್ದು ಸುಮಾರು ಒಂದು ಮಿಲಿಯ ಜನಸಂಖ್ಯೆ ಇರುವ ಅಲ್ಬೇನಿಯವನ್ನು ನುಂಗಿತು.

ಜಪಾನ್

ಜನಸಂಖ್ಯೆ–೭೨೦೫೪೧೧೮೮. ವಿಶಾಲ–೧೭೮೭೫೬ ಚದರ ಮೈಲಿಗಳು. ಜಪಾನ್ ಸಾಮ್ರಾಜ್ಯದ ವಿಸ್ತಾರ–೨೬೪೩೫೯೯ ಚದರ ಮೈಲಿಗಳು; ಜನಸಂಖ್ಯೆ ೯೭೬೯೭೫೫೫. ಜಪಾನ್ ಸಾಮ್ರಾಜ್ಯದೊಳಗೆ ಸುಮಾರು ೨ ಸಾವಿರ ವಿವಿಧ ದ್ವೀಪಗಳೂ ಸೇರಿವೆ. ಸರಕಾರದ ಖಜಾನೆ ೩೦ ಮಿಲಿಯ ಪವನುಗಳು.

ಯು. ಯಸ್. ಎ. [illegible] ಅಮೇರಿಕ

ಜನಸಂಖ್ಯೆ ೧೨೯೨೫೭ ಸಾವಿರ. ವಿಶಾಲತೆ—೩೭೮೫೫೩೭೨ ಚದರ ಮೈಲಿಗಳು. ಜಗತ್ತಿನ ಹೆಚ್ಚಿನ ಖನಿಜಸಂಪತ್ತಿ ಇಲ್ಲಿ ಸಿಗುತ್ತದೆ. ಜಗತ್ತಿನ ಪೆಟ್ರೋಲಿಯಮ್‌ನ ಶೇ. ೬೦ರಷ್ಟು, ಜಗತ್ತಿನ ಪ್ರಥಮ ಹತ್ತಿ ಬೆಳೆಯುವ ದೇಶವೂ ಇದೇ. ಉಕ್ಕು ೨೮ ಮಿಲಿಯ ಟನ್‌ಗಳು. ಕಲ್ಲಿದ್ದಲ ಹುಟ್ಟು ೩೫೧೫೩೪೪ ಸಾವಿರ ಟನ್‌ಗಳು. ಸರಕಾರದ ಖಜಾನೆಯಲ್ಲಿನ ಹಣ ೩೦೦೦ಮಿಲಿಯ ಪವನುಗಳು.

ರಷ್ಯ

ಜನಸಂಖ್ಯೆ–೧೭೦,೧೭೬ ಸಾವಿರ. ವಿಶಾಲ–೮೧೪೪೪೨೨೮ ಚದರ ಮೈಲಿಗಳು. ಲೋಕದ ನೆಲದ ಸುಮಾರು ಏಳನೇ ಒಂದಂಶದಷ್ಟು ವಿಶಾಲವಾದುದು. ಆಧುನಿಕ ನಾಗರಿಕ ಜೀವನಕ್ಕೆ ಬೇಕಾದುದೆಲ್ಲ ರಷ್ಯಕ್ಕೆ ತನ್ನಲ್ಲೇ ಸಿಗುತ್ತಿದೆ. ಕಬ್ಬಿಣ ೩೦ ಮಿಲಿಯ ಟನ್‌ಗಳು; ಎಣ್ಣೆಯೂ ಸುಮಾರು ಇಷ್ಟೇ ಇದೆ. ಬಂಗಾರದ ಶೇವಣಾತಿ ಬೇಕಾದಷ್ಟಿದೆ. ಆದೆಷ್ಟೆಂದು ತಿಳಿದುಬಂದಿಲ್ಲವಾದರೂ ವರ್ಷಂಪ್ರತಿ ೫೦ ಮಿಲಿಯ ಪವನುಗಳು ಶೇಖರವಾಗುತ್ತಿವೆ.


ವೈದ್ಯಕೀಯ ಅಧಿಕಾರಿಗಳು
ಚರ್ಮ ರೋಗಗಳನ್ನು ತಡೆಗಟ್ಟುವುದಕ್ಕಾಗಿಯೂ, ಚರ್ಮಾರೋಗ್ಯವನ್ನು ಕಾಪಾಡುವುದಕ್ಕಾಗಿಯೂ ರೆಕ್ಸೋನದ ಉಪಯೋಗವನ್ನು ಅನುಮೋದಿಸುತ್ತಾರೆ.
Rexona
MEDICATED SOAP
MEDICATED WITH CADYL
ರೆಕ್ಸೋನ ಟಾಯಿಲೆಟ್ ಸೋಪಿನಲ್ಲಿ ಕ್ರಿಮಿನಾಶಕ ಗುಣವುಳ್ಳ, ಶೈತ್ಯವನ್ನುಂಟುಮಾಡುವ ಮತ್ತು ರೋಗಪರಿಹಾರಕವಾದ "ಕೇಡಿಲ್" ಎಂಬ ಹೊಸ ಮಿಶ್ರಣವಿರುವುದು. ರೆಕ್ಸೋನದ ನಿರಂತರ ಉಪಯೋಗದಿಂದ ಚರ್ಮವ್ಯಾಧಿಯಿಲ್ಲದಂತಾಗಿ, ಚರ್ಮಾರೋಗ್ಯವು ಹೆಚ್ಚುವುದು.
ರೆಕ್ಸೋನ ಆಯಿಂಟ್‌ಮೆಂಟ್
ಆಶ್ಚರ್ಯಕರವಾದ ಶೈತ್ಯವನ್ನುಂಟುಮಾಡುವ ಮತ್ತು ರೋಗನಾಶಕ ಗುಣಗಳಿರುವುದರಿಂದ, ರೆಕ್ಸೋನ ಆಯಿಂಟ್‌ಮೆಂಟು ಹುಣ್ಣು, ಬೊಕ್ಕೆ, ಬಿವರುಸಾಲೆ, ಕಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಕಡಿಮೆಮಾಡಿ, ತೀವ್ರದಲ್ಲಿ ಗುಣಪಡಿಸುವುದು.
THE RAPID HEALER
Rexona
OINTMENT
REXONA PROPRIETARY LIMITED SYDNEY N.S.W.
ರೆಕ್ಸೋನಕ್ಕೆ ದ್ವಿಗುಣಿತವಾದ ಕಾರ್ಯಶಕ್ತಿಯಿರುವುದರಿಂದ, ಚರ್ಮವನ್ನು ರಕ್ಷಿಸುವುದಕ್ಕೂ, ಅದನ್ನು ತಂಪಾಗಿರಿಸುವುದಕ್ಕೂ ಅದು ಅಮೂಲ್ಯವಾಗಿದೆ.
1. ಮೃದುವಾದ ಆದರ ನೊರೆಯು ಕೊಳೆ ಮತ್ತು ಕ್ರಿಮಿಗಳ ಸೋಂಕಿನಿಂದ ಚರ್ಮವನ್ನು ರಕ್ಷಿಸುತ್ತದೆ.
2. ಆದರ ಪೌಷ್ಟಿಕ ದ್ರವ್ಯಗಳು, ಚರ್ಮದ ಪದರಗಳಿಗೆ ಶೈತ್ಯವನ್ನುಂಟುಮಾಡಿ, ಅವುಗಳನ್ನು ಪೋಷಿಸಿ, ಚರ್ಮಾರೋಗ್ಯವನ್ನು ಅಭಿವೃದ್ಧಿಮಾಡುವುವು.
ಚರ್ಮವು ಆರೋಗ್ಯವಾಗಿಯೂ, ಸ್ವಚ್ಛವಾಗಿಯೂ, ನಿರ್ಮಲವಾಗಿಯೂ ಇರುವುದಕ್ಕೆ ಪ್ರತಿದಿನವೂ ರೆಕ್ಸೋನವನ್ನು ಉಪಯೋಗಿಸಿರಿ.
Rexona
R.P. 11-169 KN
REXONA PROPRIETARY LIMITED

LIFE INSURANCE

IS THE ONE INVESTMENT WHICH IN PEACE OR WAR KNOWS NO DEPRECIATION. IT IS THE ONLY SCIENTIFIC MEANS WHICH PLANS WITH PRUDENCE AND CERTAINTY THE HAZARDS OF UNKNOWN TOMORROW.

EVERY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

LET "POPULAR", THE SUCCESSFUL AND PROGRESSIVE LIFE OFFICE OF YOUR OWN DISTRICT, PLAN YOUR FUTURE.

THE POPULAR INSURANCE CO., LTD.,

HEAD OFFICE: **MANGALORE,** S. I.

ಆರ್ಥರ್ ಗ್ರೀನ್‌ವುಡ್

ಪಾರ್ಲಿಮೆಂಟಿನ ವಿರೋಧ ಪಕ್ಷದ ಡೆಪ್ಯುಟಿ ಲೀಡರರಾದ ಆರ್ಥರ್ ಗ್ರೀನ್‌ವುಡ್ ತಮ್ಮ ವಿರೋಧ ಪ್ರದರ್ಶನದಿಂದಲೇ ಗಣನೀಯರಾದರು. ಯುದ್ಧಾರಂಭದಂದು ಮಿ॥ ಅಟ್ಲಿಯವರು ಅಸೌಖ್ಯದಿಂದಿದ್ದುದರಿಂದ ಇವರೇ 'ಲೇಬರ್' ಪಕ್ಷದ ಪರವಾಗಿ ಮಾತನಾಡಿದರು. ಗ್ರೀನ್‌ವುಡ್‌ರವರು ಉಪಾಧ್ಯಾಯರಾಗಿ ಹಲವಾರು ಶಾಲೆಗಳಲ್ಲಿ ಕೆಲಸ ಮಾಡಿದವರು.

ಅಂತರ್ರಾಷ್ಟ್ರೀಯ ಸಂಬಂಧವನ್ನು ವಿವೇಚಿಸಲು ನಿಯತವಾಗಿದ್ದ ಸಂಘದ ಜನರಲ್ ಸೆಕ್ರೆಟರಿಗಳಾಗಿ ಇವರು ಲಂಡನ್ನಿಗೆ ಬಂದರು. ಮುಂದೆ ಲ[illegible]ಜ್ ಜಾರ್ಜರ ಅಧ್ಯಕ್ಷತೆಯಲ್ಲಿದ್ದ "ರಿಕನ್‌ಸ್ಟ್ರಕ್ಷನ್ ಕಮಿಟಿ"ಯ ಉಪಕಾರ್ಯದರ್ಶಿಗಳಾಗಿ ೧೯೧೭ರಲ್ಲಿ ಚುನಾಯಿತರಾದರು.

ರಾಮ್ಸೇ ಮೆಕ್ಡನಾಲ್ಡರ ಸರಕಾರದ ಕಾಲ ಇವರು ಆರೋಗ್ಯ ಖಾತೆಯ ಮಂತ್ರಿಗಳಾಗಿದ್ದರು. ಇಂದು ಬೆಳೆದ ಮಗ ಹಾಗೂ ಮಗಳೊಬ್ಬಳ ಸಂಸಾರವನ್ನಾಂತು ಸುಖವಾಗಿದ್ದಾರೆ!

Printed and Published by B. Vittal Rau at the Kanteerava Office, Maidan North Road, Mangalore.
Printed by U. Vittalacharya, Manager at the Dharma Prakash Press, Car Street, Mangalore.